47	DFC/S 2447/76-77. Vyavasaya Seva Sahakari Sangha, Niyamitha, Panthur.	1 Service Co-operative Society, Ltd., Hanthur. 2 Service Co-operative Society Ltd., Kannehally	1 Kanachur 2 Kanachur Estate 3 Angadi 4 Halekere Estate 5 Kannehally 6 Harmakki 7 Devarunda 8 Hanthur-I	1 H. B. Bobe Gowda, Devarunda 2 Primus Raskin, s/o P. B Raskin, Angadi 3 Mogannao Gwda, Kanachur Estate, Kanachur 4 A. R. Uddaiah, s/o Ramaiah, Angadi (S C.) 5 B. M. Surendra, s/o Manje Gowda, Kannehally 6 H. B. Subbe Gowda, Hanthur 7 H. B Bili Gowda s/o Mare Gowda, Angadi 8 B Subbe Gowda s/o Bobe Gowda Janige Hanthur 9 Ashoka Gowda, Hanthur. 10 Supervisor—I, (D C.C. Bank Nominee) 11 Gramasevak of the Gonibeedu Circle	H. B. Bobegowda	R. Appanna Char, s/o ama Char, Hanthur	A

1	2	3	4	5	6	7	8
48	DRC/S 2448/76-77 Vyavasaya Seva Sahakari Sangha, Niyamitha, Gonibeedu.	1 Service Co-operative Society, Ltd., Chinniga. 2 Service Co-operative Society, Ltd., Gonibeedu. 3 Service Co-operative Socieey, Ltd., Bettadamane.	1 Anasur 2 Nidugodu 3 Hoysalu 4 G. Hosahally 5 Hiresikara 6 Chikmatagere 7 G. Hanumanahally 8 Bettadamane 9 Uggehally 10 Kirugunda 11 Heggaravally 12 Chakkodige 13 Udase 14 Chinniga 15 G. Agrahara 16 Kamaragodu 17 Chandrapura 18 Gonibeedu	1 C. D. Lingappa, Chinniga 2 M. A. Rezak, Chairman, Village Panchyat, Kirugunda 3 B. Byraiah, (SC) Kaskebyle 4 G. Laxminarayana Rao, Udase 5 H E. Manje gowda. S/o Ere gowda, Hoysalalu 6 Patel Ramappa Gowda. Kamaragodu 7 U. N. Chandra Gowda. Udase 8 N. J Chandre Gowda, S/o Jule Gowda Nidagodu 9 Smt Nayak, W/o Dr. Nayak Gonibeedu 10 Supervisor-I, (DCC Bank Nominee) 11 Gramasevak of the Gonibeedu Circle	C. D. Lingappa	B. E. Chandre Gowda, S/o H. E. Gopale Gowda, S/o H.P. Ere Gowda, Hoysalalu	A
49	DRC/S 2449/76-77 Vyavasaya Seva Sahakari Sangha, Niyamitha, Banakal	1 Banakal Service Co-operative Society, Ltd., Banakal 2 Service Co-operative Society, Ltd., Balur	1 Banakal 2 Heggadalu 3 Jarve 4 Kannagere 5 Banakallahally 6 Balur 7 Balur Estate	1 B S Kariyannegowda, B.A., Banakal 2 S N Pais, Banakal 3 Mariyappa Sabbali, Banakal 4 Abdul Rahiman, Banakal 5 Patel Chandre Gowda, Balur 6 B L Sannappa Gowda, Balur 7 Smt. C T Savitri, w/o Tharanatha Gowda, Banakal 8 Laxmana Rao. Vice-President, Village Panchayat, Kottigehar 9 H B Manje Gowda. Planter, Heggadalu 10 Supervisor—II. (DCC Bank Nomine) 11 Gramasevak of Banakal.	B.S.Kariyanna Gowda; B.A.;	B. E. Chandre Gowda, s/o H. E. Veere Gowda, Badavanadiane, Kolur Post.	A
	DRC/S 2450/76-77 Vyavasaya Seva Sahakari Sangha Niyamitha, B. Hosahally	1 Service Co-operative Society, Ltd., B. Hosahally 2 Service Co-operative Society, Ltd., Halike 3 Service Co-operative Society, Ltd., Kundur	1 B. Hosahally 2 Kodihally 3 Binnadi 4 Atthigere 5 Buggasagodu 6 Darshana 7 Kundur 8 Halike 9 Kolur 10 Bettagere 11 Palguni 12 Pattadur 13 Hesagal 14 Bakki Modarahally	1 B H Srinivase Gowda, Belagodu, B. Hosahally 2 H B Kale Gowda, S/o Manje Gowda, Halehalli 3 B A Jayaram, M. A., s/o B E Anne Gowda, B. Hosahally 4 M Aranha, Subbenahalli Estate, Palguni 5 Smt. Subbamma, w/o Kenche Gowda, Kundur 6 M D Ismail s/o Md. Hussain Halike 7 K S Rama Murthy, Bharathibylu, Halehalli 8 Marathiah, s/o Maraiah, (SC) Kolur. 9 Narayana Gowda. Patel, Kundur 10 Supervisor—DCCB, (DCC Bank Nomine) 11 Gramasevak of the Circle.	B.H. Srinivase Gowda	B. S. Rame Gowda, Kundur	

51	DRC/S 2451/76-77 Vyavasaya Seva Sahakari Sangha, Niyamitha, Daradahally	1 Service Co-operative Society, Ltd., Daradahally 2 Service Co-operative Society, Ltd., Jogannanakere	1 Daradahally 2 Jogannanakere 3 Kadidalu 4 Kesavalu Estate	1 B E Krishne Gowda, Maduramane Estate, Daradahally 2 Gowraiah s/o Kenchaiah, (SC) Daradahally, 3 B S Shankare Gowda, Nimbemoole Estate, Mudigere Handpost, Jogannanakere 4 D B Chandre Gowda, s/o Byre Gowda, Daradahally 5 H M Abdul Khadar, s/o Muden Beri, Andaguli 6 H B Laxman s/o Byrappa Daradahally 7 Patel Byre Gowda, s/o Anne Gowda, Kadidalu 8 D B Rama Swamy s/o Byregowda, Daradahally 9 D R Umapathy, Kesavalu Estate 10 Supervisor—I, (DCC Bank Nominee) 11 Gramasevak of the Circle.	B. E. Krishne Gowda	D. M. Ramanna, s/o Motaiah, Daradahally
52	DRC/S 2452/76-77 Vyavasaya Seva Sahakari Sangha, Niyamitha, Makonahally	1 Service Co-operative Society, Ltd., Makonahally 2 Service Co-operative Society, Ltd., Nandipura	1 Makonahally 2 Nandipura 3 Mudasosi 4 Karbylu 5 Gatteedahally 6 Kadamadakal 7 Kellur 8 Honnapura 9 Indaravalli 10 Malehally 11 Bommenahally 12 Halegodu 13 Gowthahally 14 Chattanahally 15 Pura 16 Sargampura 17 Gabbanahally	1 M B Prabhakar, Makonahally 2 D M Putte Gowda, Makonahally 3 Saganaiah, Malahally 4 M P Jagannath, Planter, Chatteghatta Estate 5 Rame gowda, Pura 6 Smt. Ponnamma, w/o N M Gopala gowda, Makonahally 7 Hammabba, s/o Baher Beri, Makonahally 8 Rodricks, Kademarkana Estate Makonahally 9 M B Chandregowda, s/o Byregowda, Makonhally 10 Supervisor-I, (DCC Bank Nominee) 11 Gramasevak of the Circle	M B Prabhakar	Gangadhara, (B. Com.,) s/o Panchaksha raiah, Hiregowja.
53	DRC/S 2453/76-77 Vyavasaya Seva Sahakari Sangha Niyamitha, Sunkasale	1 Service Co-operative Society, Ltd., Sunkasale 2 Service Co-operative Society, Ltd., Javali	1 Sunkasale 2 Javali 3 Durgadahally 4 Balige 6 Magundi 6 Helgudige 7 Arematbalagur 8 Biligalali 9 Abrugudige 10 Maliaganadu 11 Megur 12 Kelagur 13 Kelagur Estate 14 Alekhan Estate	1 B. R. Laxmane Gowda S/o Rudre Gowda, Biligali. 2 Smt Uma Ramadas, W/o B. L. Ramadas. Neranki. 3 H. S. Laxminarayana, S/o Suryanarayanappa, Aramanethalagu. 4 Smt. Vanajakshi W/o Rame Gowda, Sunkasale. 5 R. V. Bhakre, S/o V. R. Bhakre, Kelagur. 6 Narasimhaiah, (SC) S/o Badiyayya, Megur. 7 Mr. Vas, S/o S. Vas, Kallanahudige, Sunkasale. 8 Megur Rudrappa Gowda, Patel, Megur. 9 Mr. Pareira, S/o S. Pereira, Kelagur. 10 Supervisor-II, (DCC Bank Nominee). 11 Gramasevak, Hirebyle.	B. R. Laxmane Gowda	H. Subramanya, S/o Suryanarayanappa, Aramane-thalagu Sunkasale

1	2	3	4	5	6	7	8
54	DRC//S. 2454/76-77 Vyavasaya Seva Sahakari Sangha Niyamitha Halemudigere	1 Service Co-operative Society, Ltd., Bidarahally	1 Mudigere Town 2 Hosagal 3 Beesavally 4 Bilagela 5 Lakkavalli 6 Kallibyle 7 Kellibyle Estate 8 Lakkavally Estate 9 Totkela 10 Kunnahalli 11 Nadivamadkal 12 Kasagagodu 13 Koduvalli 14 Halemudigere 15 Hanumanahalli 16 Kenziga 17 Kenziga Estate 18 Gudde Estate 19 Halakote 20 Bidarahally	1 Asghar Ahmed, Mudigere. 2 Smt. Dorathy Silva, Ex-Municipal Councillor, Mudigere. 3 Smt. Tara Devi, B.A., Ex-President, Town Municipal Council, Mudigere. 4 Sanavulla, B.A., Mudigere 5 D. B. Subbe Gowda, Psesident, Taluk Congress Committee Mudigere. 6 H. B. Chandre Gowda, S/o Byre Gowda, Mudigere. 7 Siddaiah, (SC) Bidarahally 8 K. T. Keshava Murthy, Mudigere. 9 M. K. Sheshe Gowda, Halemudigere. 10 Supervisor, (DCC Bank Nominee). 11 Gramasevak of the Circle.	Asghar Ahmed	Bobanna Gowda, Halemudigere	
			SRINGERI TALUK				
55	DRC/S 2455/76-77 Vyavasaya Seva Sahakari Sangha, Niyamitha, Sringeri	Note : Sringeri Sharada Co-operativeSociety Ltd. is re-organised and the jurisdication is extended to Vidyaranyapura ServiceCo-operative Society and Vidyaranyapura service Co-operative Society, Ltd., is liquidated.	1 Sringeri 2 Ulivally 3 Vidyaranyapura 4 Honnavally 5 Darekoppa 6 Nallur 7 Hosakere 8 Halekoppa	1 Dr. H. B. Manjappa Gowda Sringeri. 2 K R. Devendra Hegde. Convenor, Youth Congress Committee, Sringeri. 3 K. M. Sreenivasa Thvavana Post. 4 V. Subramanya Bhatt, Vidyaranyapura 5 Krishna Setty. S/o Naganna Setty, Darekoppa 6 Smt. Prapulla Hiriyanna Hegde, Sringeri. 7 M K. Nagaraj, Main Street, Sringeri 8 Manjappa (SC), Thekkur Post, Sringeri 9 Daradalu Chande Gowda, Uluvally 10 Supervisor, DCCB. (DCC Bank Nominee) 11 Gramasevak of the Circle	Dr. H. B. Manjappa Gowda	B. G. Nagaraj, B.Com., Paid Secretary.	'A'

Ex. CM

					Sriyuths—		
56	DRC/S 2456/76-77 Vyavasaya Seva Sahakari Sangha, Niyamitha, Attikodige.	1 Service Co-operative Society, Ltd., Attikodige 2 Service Co-operative Society, Ltd., Gudde Thota	1 Attikodige 2 Honnagundi 3 Bettadakolalu 4 Harapanakoduge 5 Kalgundi 6 Shirur 7 Guddethota 8 Haralane 9 Megur	1 T R Shenkar Hegde, Attikodige. 2 Smt Jayalaxmi, w/o Balakrishna, Guddethota. 3 Ramaiah (SC), Ex Member Taluk Devpt. Board, Bilalkop, a. 4 G. Chandrashekar, Guddethota 5 Subbaraya, Jalamara. 6 Felix Mountherio, Attikodige. 7 K. Venkataramana Udupa, Attikodige. 8 H.B Jagadish, Attikodige. 9 Ramannagowda, Kaggare Attikodige. 10 Supervisor DCCB. (DCC Bank Nominee). 11 Gramasevak of the Circle.	T.R. Shanekar Hegde D.N. Baskar, Bilalkoppa 'A'
57	DRC/S 2457/76-77 Vyavasaya Seva Sahakari Sangha Nivamitha, Hirekodige.	1 Service Co-operative Society Ltd., Hirekodige. 2 Service Co-operative Society Ltd., Bommalapura.	1 Kumbarkoppa 2 Hirekodige 3 Bommalapura 4 Bolapura 5 Kagga	1 A.P. Vivekananda, Hirekodige. 2 S. Ananthaiah, Bommalapura. 3 Sri Lokkanna (SC) Hirekodige. 4 Siddappanaik, Gadikal. 5 V.M. Sujaya, w/o A.M. Gopala Naik, Suryadevasthana. 6 Badivanna, Kagga. 7 K Shankarappa Gowda, Bommalapura. 8 K.M Ramappa, Hirekodige. 9 A.O. Suresh, Hirekodige. 10 Supervisor, DCCB (DCC Bank Nominee). 11 Gramasevak of the Circle.	A.P. Vivekananda S P. Srinivasa Gowda s/o Putte Gowda Siggadalu 'A'

1	2	3	4	5	6	7	8
58	DRC/S 2458/76-77 Vyavasaya Seva Sahakari Sangha Niyamitha Jayapura	1 Service Co-operative Society, Limited Jayapura 2 Service Co-operative Society Limited Agalagandi	1 Jayapura 2 Likanathapura 3 Kolur 4 Agalagandi 5 Kayamballi 6 Hengur 7 Huligaradi	1 M.S. Venkataramana Setty Jayapura 2 B. Halappa Gowda Balemane, Jayapura 3 Malagar Maliyappa, (S C) Jayapura 4 A.C. Vajrappa Aradalu, Jayapura Post 5 B Ahmed, Jayapura 6 Nagappa Gowda Chairman, Village Panchayat, Jayapura 7 K C Sathish Kalekoppa, Agalagandi Post 8 A. Ganesh Rao, Settrathota 9 John Coloco, Jayapura 10 Supervisor, DCCB (DCC Bank Nominee) 11 Gramasevak of the Circle	M. S. Venkataramana Setty	V. Pandurangs s/o Venkatasubba Hebbur Makkikoppa	A
...	...	...	...	...			
...	...	...	...	...			
59	DRC/S 2459/76-77 Vyavasaya Seva Sahakari Sangha Niyamitha, Halmathur	1 Servic Co-operative Society Limited Halmathur 2 Service Co-operative Society Limited Bandigadi	1 Chavalamane. 2 Shivakaradi 3 Halmathur 4 Banaigadi 5 Hosur 6 Honnagaru 7 Devarahalli 8 Makkikoppa	1 Kodandaram Bhatta, Halmathur 2 Smt. Kalappa Gowda, w/o N. Kalappa Gowda Hebbaradi, Halmathur. 3 C.S. Shivappa Naik, Chavalmane 4 K. Krishnarpa Gowda, Kusargi Halmathur 5 Abdul Jabbar, Bandigadi 6 Rama, Kesavinamane, (S C) Bandigadi 7 H. Ramannagowda, Holehadda 8 Krishna Bhatt, Bandigadi 9 Seetharama Bhatta, Halmathur 10 Supervisor, DCC Bank (DCC Bank Nominee) 11 Gramasevak of the Circle.	Kodandaram Bhatta	Manjunatha Gowda Paid Secretary Halmathur	

60	DRC/S 2460/76-77 Vyavasaya Seva Sahakari Sangha Niyamitha Bikkali	1 Service Co-operative Society Limited, Bikkali 2 Service Co-operative Society, Limited, Shanuvalli	1 Shanuvally 2 Hiregadde 3 Kadur 4 Niluvagilu 5 Bilagadde 6 Heggaru 7 Shankarapura	1 B.S Sreekanta Rao Bikkali 2 H.R S enappa Naik Hosahalli 3 M.S Sreenivasa Attigar Shanuvally 4 U K Shamanna Shanuvally 5 Y.K Shankarappa Naik Bikkali 6 Somanna, (S C) Bilagadde 7 Smt Sharadamma, w/o K. P. Srinivas, Kanchinakeri 8 N P Shankarappa Bikkali 9 H V. Shivaram Hosahally 10 Supervisor, DCC Bank, (DCC Bank Nominee) 11 Gramasevak of the	B.S. Sreekanta Rao	K.T. Ramanna, Paid Secretr Bikkali	A	
...	...	...	...						
...	...	...	...						
61	DRC/S 2461/76-77 Vyavasaya Seva Sahakari Sangha Niyamitha Hariharapura	1 Service Co-operative Society Limited, Hariharapura 2 Circle Multipurpose Co-operative Society Ltd., Hariharapura	1 Hariharapur 2 Yedadanthi 3 Kuppali	Circle 1 Dr. U.V R. Bhat Haribarapura 2 J.B Neelakanta Bhatta Hariharapura 3 A. A Laxminarayana Bhatta Hariharapura 4 Sa ali Chandrashekaraiah, Haribarapura 5 K Krishna Setty Hariharapura. 6 M K Siddappa Gowda Hariharapura 7 Ramaiah, Yane Buradaiah (SC) Hariharapura. 8 Smt. Indiramma, Hariharapura. 9 Shaik Mohiyuddin Saheb Hariharapura. 10 Supervisor, LCC Bank (DCC Bank Nominee) 11 Gramasevak of the Circle.	Dr. U. V. R. Bhat,	Narasimha Bhatt, Paid Secretary, Hariharapura	A	12

1	2	3	4	5	6	7	8
62	DRC/S 24 2/76-77. Vyavasaya Seva Sahakari Sangha Niyamitha, Koppa.	1 Large Sized Co-operative Society, Ltd, Koppa. 2 Service Co-operative Society, Ltd , Talamakki.	1 Koppa 2 Halandur 3 Gunavanthe 4 Hunsehor 5 Bindaravally 6 Somalapura 7 Narasipura 8 Punnthi 9 Suggi 10 Marithottilu 11 Amathi 12 Addatha 13 Koppa Town 14 Kesave 15 Kakkuli 16 Talamakki 17 Pamki Estate	1 Elias Dias, Koppa. 2 K S Shantharam Kesava 3 Siddaiah (SC) Koppa 4 Smt. T. P. Bhageerathi. Koppa 5 S. A. Azeeabba, Koppa 6 K. Krishna Murthy Kandya. 7 K. T. Nagendra, Narve 8 Baligar Rama Naik, Kudregundi 9 B. M Anne Gowda, Koppa 10 Supervisor—DCC Bank (DCC Bank Nominee) 11 Gramasevak of the Circle.	Elias Dias	S.P. Chandrashekara, s/o Puttannaiah, Somalapura, Koppa.	A
63	DRC/S 2463/76-77. Vyavasaya Seva Sahakari Sangha Niyamitha, Hiregadde.	1 Service Co-operative Society Ltd.' Hiregadde. 2 Service Co-operative Society Ltd., Hosur	1 Hosur 2 Hiregadde 3 Adigebylu.	1 B. A. Nanjappa Nayak, Hiregadde 2 B. M. Srinivas Naik, Hiregadde 3 H. A. Vishnumurthy, Hosur 4 Surappa Naik, Hosur. 5 B P Yogindra, Hiregadde 6 Lingaiah (SC) Hosur 7 H B Rajagopal. Huvinahaklu Estate 8 H S Nagesh Bhatta, Hiregadde 9 Smt Chinnamma, w/o Rangappa Nayak, Hiregadde 10 Supervisor. DCC Bank (DCC Bank Nominee) 11 Gramasevak of the Circle	B.A. Nanjappa Nayak	B.S. Venkatakrishna, Paid Secretary, Angali, Hiregadde.	A
64	DRC/S 2464/76-77 Vyavasaya Seva Sahakari Sangha Niyamitha, Katteman	1 Large Sized Co-operative Society, Ltd., Kattemane 2 Service Co-operative Society, Ltd., Belavinakodige	1 Belavinakoduge 2 Boovanakatte 3 Hedse 4 Kattemane 5 Machikoppa 6 Thulavinakoppa 7 Udane 8 Belavadi 9 Kalasapura 10 Herambapura	1 V G Shankar Rao, Vishwambapura 2 H S Vasudeva Hanchikolalu 3 U V Srinivasa Rao, Urgothige 4 Channappa Gowda. Thulavinakoppa 5 Kikkere Mariyanna (SC) Karimane 6 Annayyappa Gowda, Hiduvalli 7 A K Giddaiah, (SC) Kondibyle 8 M P Krishnappa Gowda, Mathur 9 Smt. Rathnamma s/o Sri Subbaiah Hegde, Belavadigrama 10 Supervisor, DCC Bank (DCC Bank Nominee) 11 Gramasevak of the Circle	V. G. Shankar Rao	K. R. Shivaswamy Rao SSLC., G.D.C.,	

Issued this the 6th day of September 1976 under my signature and seal.

B. RUDRAPPA,
Deputy Registrar of Co-operative Societies,
Chikmagalur District.

'A' Type Bye-laws

ವ್ಯವಸಾಯ ಸೇವಾ ಸಹಕಾರಿ ಸಂಘ, ನಿಯಮಿತ

ಉಪನಿಯಮಗಳು

1. ಹೆಸರು ಮತ್ತು ವಿಳಾಸ:

1) ಸಂಘದ ಹೆಸರು .....
ವ್ಯವಸಾಯ ಸೇವಾ ಸಹಕಾರಿ ಸಂಘ, ನಿಯಮಿತ, ಎಂದು ಇದೆ. ಸಂಘದ ಕಛೇರಿಯು.....
.....ಗ್ರಾಮದಲ್ಲಿ ಇರುತ್ತದೆ.

2) ಸಂಘದ ಅಧಿಕೃತ ವಿಳಾಸ:
(1) ಸಂಘದ ಹೆಸರು :
(2) ಗ್ರಾಮ :
(3) ತಾಲ್ಲೂಕು :
(4) ಜಿಲ್ಲೆ :

2. ಕಾರ್ಯಕ್ಷೇತ್ರ:

ಸಂಘದ ಕಾರ್ಯಕ್ಷೇತ್ರವು ಈ ಕೆಳಗಿನ ಗ್ರಾಮಗಳಿಗೆ ಪರಿಮಿತವಾಗಿರುತ್ತದೆ:

(1)
(2)
(3)
(4)
(5)
(6)
(7)
(8)
(9)
(10)

3. ಉದ್ದೇಶಗಳು:

ಸಂಘದ ಉದ್ದೇಶಗಳು ಕೆಳಗೆ ಕಾಣಿಸಿದಂತೆ ಇರುತ್ತವೆ:

(1) ಸದಸ್ಯರಂಗಳಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಮನೋಭಾವನೆಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಆಧುನಿಕ ವ್ಯವಸಾಯ ಪದ್ಧತಿಗಳ ವಿಷಯದಲ್ಲಿ ಸದಸ್ಯರುಗಳಿಗೆ ತಿಳುವಳಿಕೆ ಕೊಡುವುದು.

(2) ವ್ಯವಸಾಯ ಉತ್ಪಾದನೆ ಹೆಚ್ಚಿಸಲು ಅಲ್ಪಾವಧಿ-ಮಧ್ಯಮಾವಧಿ ಸಾಲಗಳನ್ನು ಸದಸ್ಯರಿಗೆ ಪೂರೈಸುವುದು: ಇಂಥ ಸಾಲಗಳನ್ನು ವಿತರಣೆ ಮಾಡುವಾಗ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಪ್ರಾಮುಖ್ಯತೆಯನ್ನು ಕೊಡತಕ್ಕದ್ದು.

(3) ಸದಸ್ಯರಿಗೆ ಸಾಲ-ಸೌಲಭ್ಯಗಳನ್ನು ಪೂರೈಸಲು ಬೇಕಾಗುವ ಹಣವನ್ನು ಸಂಘವು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಥವಾ ರಿಜಿಸ್ಟ್ರಾರರಿಂದ ಮನ್ನಣೆ ಪಡೆದ ಯಾವುದೇ ಬ್ಯಾಂಕು ಅಥವಾ ಬ್ಯಾಂಕುಗಳಿಂದ ಪಡೆಯಬಹುದು.

(4) ಸದಸ್ಯರಿಗೆ ಅಗತ್ಯವಾದ ವ್ಯವಸಾಯ ಸಾಮಗ್ರಿಗಳು ಅಂದರೆ ಬಿತ್ತನೆ ಬೀಜ, ಗೊಬ್ಬರ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಔಷಧಿ ಇತ್ಯಾದಿಗಳನ್ನು ಪೂರೈಸುವುದು.

(5) ನೀರಾವರಿ ಸೌಲಭ್ಯಗಳನ್ನು ಸದಸ್ಯರಿಗೆ ಒದಗಿಸುವುದು.

(6) ಸದಸ್ಯರು ಬೆಳೆದ ವ್ಯವಸಾಯ ಉತ್ಪನ್ನಗಳ ಸಂಗ್ರಹಣೆ ಮತ್ತು ಹಣಕಾಸಿನ ವ್ಯವಸ್ಥೆ ಮಾಡತಕ್ಕದ್ದು.

(7) ಸದಸ್ಯರ ಆದಾಯವನ್ನು ಹೆಚ್ಚಿಸಲು ಗೃಹ ಕೈಗಾರಿಕೆ ಮತ್ತು ಪಶುಸಂಗೋಪನೆ, ಕೋಳಿ ಸಾಕಾಣಿಕೆ ಹಾಗೂ ಇತರ ಕಾರ್ಯಗಳನ್ನು ಕೈಗೊಳ್ಳಲು ಸದಸ್ಯರಿಗೆ ಸಹಾಯವನ್ನೊದಗಿಸುವುದು.

(8) ಸದಸ್ಯರ ಜಮೀನಿನ ಮಣ್ಣು ಕೊಚ್ಚಿ ಹೋಗದಂತೆ ಶಾಸ್ತ್ರೀಯ ರೀತಿಯಲ್ಲಿ ಒಡ್ಡುಗಳನ್ನು ಹಾಕಲು ವಿಧ್ಯುಕ್ತವಾಗಿ ಏರ್ಪಡಿಸುವುದು ಮತ್ತು ಇತರ ಸುಧಾರಿತ ವ್ಯವಸಾಯ ಪದ್ಧತಿಗಳನ್ನು ಸದಸ್ಯರು ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು.

(9) ಸದಸ್ಯರ ಆರ್ಥಿಕ ಅಭಿವೃದ್ಧಿಗೆ ನೆರವಾಗಲು ಸಂಘವು ಟ್ರಾಕ್ಟರ್, ಪವರ್ ಟಿಲ್ಲರ್ಸ್, ಸ್ಪ್ರೇಯರ್ಸ್, ಡಸ್ಟರ್ಸ್, ಪಂಪುಸೆಟ್ಟು ಮುಂತಾದ ವ್ಯವಸಾಯ ಯಂತ್ರೋಪಕರಣಗಳನ್ನು ಸ್ವಂತವಾಗಿ ಅಥವಾ ಬಾಡಿಗೆಯಿಂದ ಸಂಘವು ಪಡೆದುಕೊಂಡು ಸದಸ್ಯರಿಗೆ ಬಾಡಿಗೆ ರೂಪದಲ್ಲಿ ಒದಗಿಸುವುದು.

(10) ಹೈನು ಜಾನುವಾರುಗಳ ತಳಿಗಳನ್ನು ಉತ್ತಮಗೊಳಿಸಲು ಬೀಜದ ಹೋರಿಗಳನ್ನು ಕೊಳ್ಳಲು ಹಾಗೂ ಮಾದರಿ ಡೇರಿಗಳನ್ನು ಸ್ಥಾಪಿಸಲು ಸದಸ್ಯರಿಗೆ ಸಹಾಯ ಮಾಡುವುದು.

(11) ವ್ಯವಸಾಯದ ಉತ್ಪಾದನೆಗಳನ್ನು ಶೇಖರಿಸಿಡಲು, ಕೆಡದಂತೆ ರಕ್ಷಿಸಲು ಉಗ್ರಾಣಗಳನ್ನು ಸ್ವಂತವಾಗಿ ಇಲ್ಲವೆ ಬಾಡಿಗೆಯಿಂದ ಪಡೆದುಕೊಳ್ಳುವುದು.

(12) ಆಹಾರ ಧಾನ್ಯಗಳನ್ನು ಹಾಗೂ ನಿತ್ಯ ಬಳಕೆಗೆ ಬೇಕಾಗುವ ವಸ್ತುಗಳನ್ನು ಸರಬರಾಜು ಮಾಡುವುದು.

(13) ಸದಸ್ಯರಿಗೆ ಚಿನ್ನ ಹಾಗೂ ಬೆಳ್ಳಿ ಆಭರಣಗಳ ಮೇಲೆ ಸಾಲ ನೀಡುವುದು.

(14) ಸದಸ್ಯರು ಮತ್ತು ಸದಸ್ಯೇತರರಿಂದ ಠೇವಣಾತಿಗಳನ್ನು ಸ್ವೀಕರಿಸುವುದು.

(15) ಸದಸ್ಯರಿಗೆ ಬಳಕೆ ಸಾಲ ನೀಡುವುದು (ಕನ್ಸಮ್‌ಷನ್ ಫೈನಾನ್ಸ್).

(16) ಸಹಕಾರಿ ಶಿಕ್ಷಣ ಹಾಗೂ ಪ್ರಚಾರಕ್ಕೆ ನೆರವು ನೀಡುವುದು.

(17) ಸಂಘವ ವ್ಯವಹಾರಕ್ಕೆ ಅನುಕೂಲವಾಗುವ ಸಂದರ್ಭದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಮಂಜೂರಾತಿ ಪಡೆದು ಸಂಘದ ಕಾರ್ಯಕ್ಷೇತ್ರದಲ್ಲಿ ಶಾಖೆಗಳನ್ನು ತೆರೆಯುವುದು.

(18) ಸದಸ್ಯರ ಸರ್ವತೋಮುಖ ಅಭಿವೃದ್ಧಿಗಾಗಿ ಪೂರಕವಾದ ಮತ್ತು ಮೇಲ್ಕಾಣಿಸಿವ ಉದ್ದೇಶಗಳಿಗೊಳಪಟ್ಟು ಮತ್ತಿತರ ಕಾರ್ಯಗಳನ್ನು ಕೈಗೊಳ್ಳುವುದು.

4. ಜವಾಬ್ದಾರಿ :

ಸಂಘಕ್ಕೆ ಹೊರಗಿನಿಂದ ತರತಕ್ಕ ಸಾಲಗಳು ಮತ್ತು ಠೇವಣಾತಿಗಳ ಬಗ್ಗೆ ಸದಸ್ಯನ ಜವಾಬ್ದಾರಿಯು (ಲಯಬಿಲಿಟಿ) ಅವನು ಸಂಘದಲ್ಲಿ ಪಡೆದ ಷೇರುಗಳ ಹಣಕ್ಕೆ ಪರಿಮಿತವಾಗಿರುತ್ತದೆ.

5. ಬಂಡವಾಳ :

1) ಸಂಘವು ತನಗೆ ಬೇಕಾಗುವ ಬಂಡವಾಳವನ್ನು ಕೆಳಕಂಡ ರೀತಿಗಳಲ್ಲಿ ಪಡೆದುಕೊಳ್ಳಬಹುದು :

(1) ಪ್ರವೇಶ ಧನ
(2) ಷೇರು ಫೀ
(3) ಷೇರು ಹಣ
(4) ಸರಕಾರದ ಷೇರು ಹಣ
(5) ಠೇವಣಾತಿಗಳು—ಸಂಘದ ಕಾರ್ಯಕ್ಷೇತ್ರದಲ್ಲಿರುವ ಸದಸ್ಯರು ಮತ್ತು ಸದಸ್ಯೇತರರಿಂದ
(6) ಸಾಲ ಮತ್ತು ಸಹಾಯ ಧನಗಳು—ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಅಥವಾ ರಿಜಿಸ್ಟ್ರಾರ್‌ರವರಿಂದ ಮಂಜೂರಾತಿ ಪಡೆದ ಇತರ ಬ್ಯಾಂಕುಗಳಿಂದ
(7) ದೇಣಿಗೆಗಳು
(8) ಇತರ ಬಾಬುಗಳಿಂದ

(2) ಸಂಘವು ಠೇವಣಿ ಮತ್ತು ಸಾಲದ ರೂಪದಲ್ಲಿ ಪಡೆಯಬಹುದಾದ ಸಾಲದ ವೊತ್ತವು ವಸೂಲಾದ ಷೇರು ಹಣ, ಕಾಯ್ದಿಟ್ಟ ನಿಧಿ ಮತ್ತು ಕಟ್ಟಡ ನಿಧಿಯ ಒಟ್ಟು ಹಣದ ಹತ್ತರಪಟ್ಟು ಆಗುವ ಹಣದಲ್ಲಿ ಸಂಘಕ್ಕೆ ಆದ ನಷ್ಟವನ್ನು ವಜಾ ಮಾಡಿ ಉಳಿದ ವೊತ್ತಕ್ಕೆ ಮೀರಕೂಡದು. ಇದಕ್ಕೂ ಮೀರಬೇಕಾದರೆ ಸರಕಾರದ ಪೂರ್ವಸಮ್ಮತಿ ಅಗತ್ಯ.

6. ಷೇರುಗಳು :

(1) ಸಂಘದ ಒಟ್ಟು ಅಧಿಕೃತ ಬಂಡವಾಳವು ಐದು ಲಕ್ಷ (5,00,000) ರೂ.ಗಳು ಇದ್ದು, ಅದು ಕೆಳಗೆ ನಮೂದಿಸಿದಂತೆ ಇರುತ್ತದೆ :

(ಅ) ವ್ಯಕ್ತಿಗಳಿಂದ "ಎ" ದರ್ಜೆ ಷೇರುಗಳು—10 ರೂ.ಗೆ ಒಂದರಂತೆ—40,000 ಷೇರುಗಳು ಇರತಕ್ಕದ್ದು.

(ಬ) ರಾಜ್ಯ ಸರಕಾರ ಅಥವಾ ರಾಜ್ಯ ಸರ್ಕಾರವು ಸೂಚಿಸಿರುವ ಸಂಸ್ಥೆಗಳಿಂದ "ಬಿ" ದರ್ಜೆ ಷೇರುಗಳು—100 ರೂ.ಗೆ ಒಂದು ಷೇರಿನಂತೆ—1,000 ಷೇರುಗಳು ಇರತಕ್ಕದ್ದು.

(2) ಸದಸ್ಯತ್ವಕ್ಕೆ ಅರ್ಜಿಯು ಬರಹದಲ್ಲಿದ್ದು, ಸಂಘದ ಕಾರ್ಯದರ್ಶಿಗೆ ಅದನ್ನು ಕಳುಹಿಸಬೇಕು. ಅರ್ಜಿಯೊಂದಿಗೆ ಪ್ರತಿ ಷೇರಿಗೆ ಷೇರು ಫೀ 25 ಪೈಸೆಯಂತೆ ಮತ್ತು ಷೇರು ಹಣವನ್ನು ಸಲ್ಲಿಸಬೇಕು. ಅಂತಹ ಅರ್ಜಿಯನ್ನು ಆಡಳಿತ ಸಮಿತಿಯು ಪರಿಶೀಲಿಸಿ ಇತ್ಯರ್ಥ ಪಡಿಸುವುದು. ಸದಸ್ಯನು ಪಡೆಯಬಹುದಾದ ಗರಿಷ್ಠ ಷೇರುಗಳ ವೊತ್ತ ಸಂಘದ ಷೇರು ಹಣದ ಐದನೆಯ ಒಂದು ಭಾಗ ಅಥವಾ 10,000 ರೂಪಾಯಿಗಳಲ್ಲಿ ಯಾವುದು ಕಡಿಮೆಯೋ ಅದಕ್ಕಿಂತ ಮೀರಿರಬಾರದು.

(3) ಪ್ರತಿ ಸದಸ್ಯನಿಗೂ ಅವನು ಹೊಂದಿರುವ ಷೇರುಗಳ ಸಂಖ್ಯೆ ಹಾಗೂ ವೊತ್ತವನ್ನು ನಿರೂಪಿಸಿರುವ ಸರ್ಟಿಫಿಕೇಟ್ ಒಂದನ್ನು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಸೆಹಿ ಮಾಡಿಕೊಡುವರು. ಅಂತಹ ಸರ್ಟಿಫಿಕೇಟು ಕಳೆದುಹೋದಲ್ಲಿ ಸದಸ್ಯರು ಸೂಕ್ತ ಕಾರಣದೊಂದಿಗೆ ಅರ್ಜಿ ಸಲ್ಲಿಸಿ, 50 ಪೈಸೆ ಸಂಘಕ್ಕೆ ಜಮಾ ಮಾಡಿ ಹೊಸ ಪ್ರತಿಯೊಂದನ್ನು ಪಡೆಯಬಹುದು.

(4) ಸದಸ್ಯರು ತಮ್ಮ ಷೇರನ್ನು ಇನ್ನೊಬ್ಬರ ಹೆಸರಿಗೆ ವರ್ಗಾಯಿಸಲು ಅರ್ಜಿ ಕೊಡಬಹುದು. ಅಂತಹ ವರ್ಗಾವಣೆಗೆ ಪ್ರತಿ ಷೇರಿಗೆ 25 ಪೈಸೆಯಂತೆ ಶುಲ್ಕ ಕೊಡಬೇಕಾಗುವುದು. ವರ್ಗಾವಣೆಯನ್ನು ಸದಸ್ಯತ್ವ ಪಡೆದ 3 ವರ್ಷಕ್ಕೆ ಮೊದಲು ಮಾಡುವಂತಿಲ್ಲ. ವರ್ಗಾವಣೆಗೆ ಬರಹದ ಮೂಲಕ ಕೋರಿಕೆ ಸಲ್ಲಿಸಬೇಕು. ಯಾವ ವರ್ಗಾವಣೆಯೂ ಸಂಘದ ಆಡಳಿತ ಸಮಿತಿಯ ಒಪ್ಪಿಗೆಯಿಲ್ಲದೆ ಸಿಂಧುವಾಗದು. ಯಾವ ಸದಸ್ಯನ ಷೇರು ಹಣವನ್ನೇ ಆಗಲಿ, ಅವನು ರಾಜೀನಾಮೆ ನೀಡದ ಹೊರತು ಹಾಗೂ ಅದನ್ನು ಒಪ್ಪಿಕೊಳ್ಳದ ಹೊರತು ನಗದು ಮೂಲಕ ವಾಪಸು ಪಡೆಯುವಂತಿಲ್ಲ. ಅಂತಹ ವಾಪಸಾತಿ ಷೇರು ಹಣವನ್ನು ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1960ರ ನಿಯಮ 12 ರಂತೆ ಲೆಕ್ಕ ಹಾಕಲಾಗುವುದು. ಸದಸ್ಯನ ಮರಣಾನಂತರ, ಅವನ ಉತ್ತರಾಧಿಕಾರಿಗೆ ಅವನ ಷೇರು ಹಣವನ್ನು ಸಹಕಾರಿ ಸಂಘಗಳ ಕಾಯಿದೆ ಕಲಮು 24ರ ಪ್ರಕಾರ ಇತ್ಯರ್ಥ ಮಾಡಲಾಗುವುದು.

7. ಸದಸ್ಯತ್ವ :

(1) ಸಂಘದ ಸದಸ್ಯತ್ವವು ಈ ಕೆಳಗಿನಂತಿರುತ್ತದೆ :

(1) **ಸದಸ್ಯರು :** ಸಂಘವನ್ನು ರಿಜಿಸ್ಟರ್ ಮಾಡಿಕೊಳ್ಳುವಾಗ್ಗೆ ಅರಿಕೆ ಮಾಡಿಕೊಳ್ಳುವ ವ್ಯಕ್ತಿಗಳು (ಪ್ರಮೋಟರ್ಸ್) ಮತ್ತು ಆಮೇಲೆ ಕ್ರಮವಾಗಿ ಸಂಘಕ್ಕೆ ಸೇರಿದವರನ್ನು ಸದಸ್ಯರೆಂದು ಪರಿಗಣಿಸಲಾಗುವುದು. 18 ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರು ಹಾಗೂ ಸಂಘದ ವ್ಯಾಪ್ತಿಯಲ್ಲಿನ ಗ್ರಾಮ ಹಾಗೂ ಗ್ರಾಮಗಳಲ್ಲಿ ವಾಸಿಸುವವರು ಮಾತ್ರ ಸಂಘಕ್ಕೆ ಸದಸ್ಯರಾಗಲು ಅರ್ಹರಾಗಿರುತ್ತಾರೆ.

(2) **ಸಹಸದಸ್ಯರು :** ಸಹಕಾರಿ ಸಂಘದ ಕಾಯ್ದೆಯ 16ನೇ ಕಲಮಿಗನುಸಾರವಾಗಿ ಸದಸ್ಯತ್ವವನ್ನು ಕೋರಿ ಸಂಘಕ್ಕೆ ಅರ್ಜಿ ಸಲ್ಲಿಸಿದವರನ್ನು ಅವರ ಅರ್ಜಿ ಇತ್ಯರ್ಥವಾಗುವವರೆಗೆ ಸಹಸದಸ್ಯರೆಂದು ಭಾವಿಸಲಾಗುವುದು. ಸಹಸದಸ್ಯರು ಷೇರು ಪಡೆಯಬಹುದು ; ಆದರೆ ಅವರಿಗೆ ಮತಾಧಿಕಾರವು ಇರುವುದಿಲ್ಲ ಮತ್ತು ಸಂಘದ ಯಾವುದೇ ಅಧಿಕಾರ ಸ್ಥಾನವನ್ನು ಹೊಂದಲು ಬರುವುದಿಲ್ಲ.

(3) **ನಾಮ ಮಾತ್ರ ಸದಸ್ಯರು :** ಸಂಘದೊಂದಿಗೆ ವ್ಯವಹರಿಸುವ ವ್ಯಕ್ತಿಗಳನ್ನು ಅಥವಾ ಸಂಘ-ಸಂಸ್ಥೆಗಳನ್ನು ಪ್ರವೇಶ ಫೀ ರೂ 100ರಂತೆ ಪಡೆದುಕೊಂಡು ನಾಮಮಾತ್ರ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು. ಇಂತಹ ಸದಸ್ಯರು ಸಂಘದ ಯಾವುದೇ ಅಧಿಕಾರಿಯಾಗಲೀ ಬರುವುದಿಲ್ಲ ಹಾಗೂ ಸಂಘದ ಲಾಭಾಂಶವನ್ನು ಪಡೆಯಲು ಬಾಧ್ಯಸ್ಥರಲ್ಲ ಮತ್ತು ಅವರಿಗೆ ಮತಾಧಿಕಾರ ಇರುವುದಿಲ್ಲ.

(4) **ಸರಕಾರ :** ಕರ್ನಾಟಕ ರಾಜ್ಯ ಸರಕಾರ ಅಥವಾ ಸರಕಾರದಿಂದ ಸೂಚಿತವಾದ ಸಂಸ್ಥೆಗಳು ಸಂಘದ ಸದಸ್ಯತ್ವ ಪಡೆಯಬಹುದು.

(2) **ಕೆಳಕಂಡವರು ಸಂಘದ ಸದಸ್ಯರಾಗಬಹುದು :**

(1) ಅರ್ಹನಿರುವ ವ್ಯಕ್ತಿಯ ಸಂಘದ ಸದಸ್ಯತ್ವವನ್ನು ಬಯಸಿ ಷೇರು ಹಣ, ಪೇರು ಫೀ, ಪ್ರವೇಶ ಧನದೊಂದಿಗೆ ಅರ್ಜಿಯನ್ನು ಸಲ್ಲಿಸಿದ ದಿನದಿಂದ ಅವನನ್ನು ಸಹಸದಸ್ಯನನ್ನಾಗಿ ಪರಿಗಣಿಸಲಾಗುವುದು. ಅಂತಹವನ ಅರ್ಜಿಯ ಬಗ್ಗೆ ಸಂಘಕ್ಕೆ ಏನಾದರೂ ಆಕ್ಷೇಪಣೆ ಇದ್ದಲ್ಲಿ ಅಂಥ ಆಕ್ಷೇಪಣೆಯನ್ನು 15 ದಿನಗಳೊಳಗಾಗಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಕಳುಹಿಸತಕ್ಕದ್ದು. ಆಕ್ಷೇಪಣೆ ಇರದೇ ಇದ್ದ ಪಕ್ಷದಲ್ಲಿ ಅಂಥವನನ್ನು ಸಂಘದ ಪೂರ್ಣ ಸದಸ್ಯನೆಂದು ಅರ್ಜಿ ಸಲ್ಲಿಸಿದ 15 ದಿನಗಳ ನಂತರ, ಪರಿಗಣಿಸಲಾಗುವುದು.

(2) ಪ್ರತಿ ಷೇರು ಫೀ 0—25 ಪೈಸೆ ಮತ್ತು ಪ್ರವೇಶ ಧನ ಪ್ರತಿ ವ್ಯಕ್ತಿಗೆ 1—00 ರೂ, ಯಂತೆ ಇರತಕ್ಕದ್ದು. ಆದರೆ ಈ ನಿಯಮವು ರಾಜ್ಯ ಸರಕಾರ ಅಥವಾ ಸರ್ಕಾರದಿಂದ ಸೂಚಿತವಾದ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ.

8. ಸದಸ್ಯತ್ವ ಕಳದುಕೊಳ್ಳುವಿಕೆ :

(1) ಈ ಕೆಳಗಿನ ಪ್ರಸಂಗಗಳಲ್ಲಿ ಸದಸ್ಯನು ಸಂಘದಲ್ಲಿ ತನ್ನ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾನೆ :

(1) ಮೃತಪಟ್ಟರೆ,
(2) ತನ್ನ ಎಲ್ಲ ಷೇರು ಹಣವನ್ನು ಸಮಿತಿಯ ಒಪ್ಪಿಗೆಯ ಮೇರೆಗೆ ಮತ್ತೊಬ್ಬ ಸದಸ್ಯನಿಗೆ ವರ್ಗಾಯಿಸಿದರೆ,
(3) ಸಂಘದ ಕಾರ್ಯಕ್ಷೇತ್ರದಿಂದ ಸದಸ್ಯನು ಖಾಯಂ ಆಗಿ ಬಿಟ್ಟು ಹೋದರೆ,
(4) ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಆಡಳಿತ ಸಮಿತಿಯ ಒಪ್ಪಿಗೆಯ ಮೇರೆಗೆ ಷೇರು ಹಣವನ್ನು ವಾಪಸ್ಸು ಪಡೆದರೆ,
(5) ದಿವಾಳಿಯೆಂಬುದಾಗಿ ತೀರ್ಪನ್ನು ಪಡೆಯಲು ಅರ್ಜಿಯನ್ನು ಹಾಕಿಕೊಂಡಿದ್ದರೆ ಅಥವಾ ದಿವಾಳಿತನದಿಂದ ಬಿಡುಗಡೆಯಾಗಿಲ್ಲದಿದ್ದರೆ ಅಥವಾ ಯಾವುದಾದರೂ ರಾಜಕೀಯ ಕಾರಣಗಳಲ್ಲದ ಅಪರಾಧಗಳಿಗಾಗಿ ಕ್ರಿಮಿನಲ್ ಕೋರ್ಟಿನಿಂದ ಶಿಕ್ಷೆಯನ್ನು ಹೊಂದಿ ಸಜಾ ಅನುಭವಿಸಿದ್ದರೆ.

(2) ಸಂಘದ ಯಾವುದೇ ಸದಸ್ಯನು ಸಂಘದ ಗೌರವಕ್ಕೆ, ಅದರ ನಂಬುಗೆ ಮತ್ತು ಹಿತದೃಷ್ಟಿಗೆ ಲೋಪ ಬರಬಹುದಾದ ರೀತಿಯಲ್ಲಿ ವರ್ತಿಸಿದ್ದರೆ ಅಥವಾ ಸಂಘಕ್ಕೆ ಯಾವ ವಿಧದಿಂದಲಾದರೂ ದ್ರೋಹ ಮಾಡಿದ್ದಾನೆಂದು ಕಂಡುಬಂದರೆ, ಅಂಥ ಸದಸ್ಯನನ್ನು ಸಂಘದ ಸದಸ್ಯತ್ವದಿಂದ ವಜಾ ಮಾಡಲು ಸರ್ವ ಸದಸ್ಯರ ಸಭೆಗೆ ಅಧಿಕಾರವಿರುತ್ತದೆ. ಹೀಗೆ ವಜಾ ಮಾಡುವುದಕ್ಕೆ ಮುನ್ನ ಸದಸ್ಯನ ಬಗ್ಗೆ ವಿಚಾರಣೆ ನಡೆಸಲು ಕೆಳಕಂಡ ವಿವರ ಪಡೆದಿರಬೇಕು. ಅಂಥ ಸದಸ್ಯನಿಗೆ ಸದಸ್ಯತ್ವದಿಂದ ಅವನನ್ನು ಏಕೆ ತೆಗೆದುಹಾಕಬಾರದೆಂಬುದಕ್ಕೆ ವಿವರಣೆ ಕೊಡಲು ಕನಿಷ್ಠ ಪಕ್ಷ 15 ದಿನಗಳ ಸಮಜಾಯಿಷಿ ನೋಟೀಸನ್ನು ಕೊಟ್ಟಿರಬೇಕು.

(3) ಸದಸ್ಯನಾಗಿ ಸೇರಿಸಲ್ಪಟ್ಟ 3 ವರ್ಷಗಳವರೆಗೆ ಯಾವ ಸದಸ್ಯನೇ ಆಗಲಿ ಸದಸ್ಯತ್ವ ಬಿಡಲು ಅಥವಾ ಪಾವತಿ ಮಾಡಿರುವ ಷೇರು ಹಣ ವಾಪಸು ಪಡೆಯಲು ಅಧಿಕಾರ ಹೊಂದಿರುವುದಿಲ್ಲ. ಹಾಗೆ ಸದಸ್ಯತ್ವ ಬಿಡುವ ಮೊದಲು ತನ್ನ ಸ್ವಂತ ಸಾಲಗಳನ್ನೂ ತನ್ನ ಜಾಮೀನಿನ ಮೇರೆ ಇತರರಿಗೆ ಕೊಡಿಸಿರುವ ಸಾಲಗಳನ್ನೂ ಸಹ ಸಂಘಕ್ಕೆ ಸಲ್ಲಿಸಿ ಲಿಖಿತ ಮೂಲಕ ಆಡಳಿತ ಸಮಿತಿಯವರಿಗೆ ತಿಳಿಸಿರಬೇಕು. ಆಡಳಿತ ಸಮಿತಿಯವರು ಮಂಜೂರು ಮಾಡಿದ ದಿನಾಂಕದಿಂದ ಆತನು ಸದಸ್ಯತ್ವದಿಂದ ನಿವೃತ್ತನಾಗುತ್ತಾನೆ. ಹೀಗೆ ನಿವೃತ್ತಿ ಮಾಡಲ್ಪಟ್ಟ ಸದಸ್ಯನಿಗೆ ಅವನು ಸಂಘಕ್ಕೆ ಪಾವತಿ ಮಾಡಿರುವ ಷೇರು ಹಣವನ್ನು ಅಲ್ಲಿಯವರೆಗೆ ನಿರ್ಧರಿಸಿರುವ ಷೇರುಗಳ ಮೇಲಿನ ಲಾಭಾಂಶ ಸಮೇತ ವಾಪಸ್ಸು ಮಾಡತಕ್ಕದ್ದು. ಆದರೆ ಯಾವ ಜಾಲಿನಲ್ಲಿಯೂ ಅದಕ್ಕೆ ಹಿಂದಿನ ಸಾಲಿನ ಆಖೈರಿನಲ್ಲಿದ್ದ ಒಟ್ಟು ಷೇರು ಮೊಬಲಗಿನ ಶೇಕಡ 10 ರಷ್ಟಕ್ಕಿಂತ ಹೆಚ್ಚು ಹಣವನ್ನು ಯಾವಕಾರಣದಿಂದಲೂ ವಾಪಸ್ಸು ಮಾಡತಕ್ಕದ್ದಲ್ಲ.

9. ಉತ್ತರಾಧಿಕಾರಿಯ ನೇಮಕ :

ಪ್ರತಿಯೊಬ್ಬ ಸದಸ್ಯನು ತನ್ನ ಮರಣಾನಂತರ ತನಗೆ ಸಂಘದಲ್ಲಿರುವ ಹಕ್ಕಿನ ಮೇಲೆ ಉತ್ತರಾಧಿಕಾರಿಯನ್ನಾಗಿ ಕರ್ನಾಟಕ ಸಹಕಾರಿ ಸಂಘಗಳ ನಿಯಮ 11ರ ಅನ್ವಯ ಯಾರನ್ನಾದರೂ ನಿಯಮಿಸಬಹುದು. ಅಂತಹ ನೇಮಕಾತಿಯ ಬಗ್ಗೆ ಸಂಘದ ಪುಸ್ತಕದಲ್ಲಿ ರಿಜಿಸ್ಟರ್ ಆಗಿರಬೇಕು.

10. ಕೇವಣಾತಿಗಳು:

(1) ಆಡಳಿತ ಸಮಿತಿಯವರಿಗೆ ಸೂಕ್ತ ತೋರಿದಲ್ಲಿ ಸದಸ್ಯರಿಂದಾಗಲಿ ಅಥವಾ ಇತರರಿಂದಾಗಲಿ ಕೆಳಗೆ ನಮೂದಿಸಿದ ಕೇವಣಾತಿಗಳನ್ನು ಸ್ವೀಕರಿಸಬಹುದು :

(1) ಚಾಲ್ತಿ ಕೇವಣಾತಿಗಳು

(2) ಖಾಯಂ ಠೇವಣಾತಿಗಳು

(3) ಸಂಚಯ (ಉಳಿತಾಯ) ಠೇವಣಾತಿಗಳು

(4) ಪಿಗ್ಮಿ ಠೇವಣಾತಿಗಳು

(2) ಈ ಮೇಲ್ಕಂಡ ಠೇವಣಾತಿಗಳ ಮೇಲೆ ಬಡ್ಡಿದರ ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಆಡಳಿತ ಸಮಿತಿಯವರು ಒಳ ನಿಬಂಧನೆಗಳನ್ನು (ಸಬ್ಸಿಡಿಯರಿ ರೂಲ್ಸ್) ರಚಿಸಿ ಅದಕ್ಕೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಒಪ್ಪಿಗೆ ಪಡೆಯತಕ್ಕದ್ದು.

11. ವಾರ್ಷಿಕ ಸರ್ವ ಸದಸ್ಯರ ಸಭೆ:

ಅ) ಈ ಸಭೆಯನ್ನು ಪ್ರತಿ ಸಾಲಿನಲ್ಲಿಯೂ ಸಾಲಾಖೈರಾದ ಮೂರು ತಿಂಗಳೊಳಗಾಗಿ ಕರೆಯಬೇಕು ಮತ್ತು ಈ ಸಭೆಯಲ್ಲಿ ಕೆಳಗೆ ಕಾಣಿಸಿದ ವಿಷಯಗಳನ್ನು ಪರಿಶೀಲಿಸಬೇಕು.

(1) ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಕರೆಯುವ ಬಗ್ಗೆ ಕೊಟ್ಟ ನೋಟೀಸನ್ನು ಓದುವುದು ಮತ್ತು ದೃಢೀಕರಿಸುವುದು.

(2) ಆಡಳಿತ ಸಮಿತಿಯು ಸಲ್ಲಿಸಿದ ವಾರ್ಷಿಕ ವರದಿ ಮತ್ತು ಆಡಿಟ್ ವರದಿಗಳನ್ನು ಅಂಗೀಕರಿಸುವುದು ಮತ್ತು ನಿವ್ವಳ ಲಾಭದ ವಿಲೇವಾರಿ ಮಾಡುವುದು,

(3) ಆಡಳಿತ ಸಮಿತಿಯವರು ತಯಾರು ಮಾಡಿದ ಮುಂದಿನ ಸಾಲಿನ ಕಾರ್ಯಕ್ರಮಗಳನ್ನು ಮತ್ತು ಆಯವ್ಯಯ ಪತ್ರಿಕೆಯನ್ನು ಮಂಜೂರು ಮಾಡುವುದು.

(4) ಕರ್ನಾಟಕ ಸಹಕಾರಿ ಸಂಘಗಳ ನಿಯಮ 14ರ ಪ್ರಕಾರ ಆಡಳಿತ ಸಮಿತಿ ಸದಸ್ಯರುಗಳ ಚುನಾವಣೆ ನಡೆಸುವುದು.

(5) ಸಂಘಕ್ಕೆ ಹೊರಗಿನಿಂದ ತರತಕ್ಕ ಸಾಲಗಳ ಪರಿಮಿತಿಯನ್ನು ನಿರ್ದರಿಸುವುದು.

(6) ಉಪನಿಯಮಗಳನ್ನು ತಿದ್ದುಪಡಿ ಮಾಡುವುದು;

(7) ಆಡಳಿತ ಸಮಿತಿಯು ಅಥವಾ ಸದಸ್ಯರುಗಳ ಕಾನೂನು ಪ್ರಕಾರ ತರಬಹುದಾದ ಇತರ ವಿಷಯಗಳನ್ನು ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

ಬ) ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರು ವಹಿಸತಕ್ಕದ್ದು. ಅವರು ಗೈರುಹಾಜರಿದ್ದರೆ, ಸಭೆ ತನ್ನ ಸದಸ್ಯರಲ್ಲಿ ಒಬ್ಬರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಲು ಆರಿಸಬೇಕು.

12. ವಿಶೇಷ ಸರ್ವ ಸದಸ್ಯರ ಸಭೆ :

ಆಡಳಿತ ಸಮಿತಿಯವರು ತಮಗೆ ಸೂಕ್ತ ತೋರಿದಾಗ ಈ ಸಭೆಯನ್ನು ಕರೆಯಬಹುದು. ಅಲ್ಲದೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಂದ ಲಿಖಿತ ಮೂಲಕ ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯಬೇಕೆಂದು ಕೋರಲ್ಪಟ್ಟಾಗಲೂ ಅಥವಾ ಸಂಘದಲ್ಲಿನ ಒಟ್ಟು ಸದಸ್ಯರುಗಳ ಪೈಕಿ ಕನಿಷ್ಠ ಪಕ್ಷ ಐದನೇ ಒಂದರಷ್ಟು ಸದಸ್ಯರು ಬರಹ ಮೂಲಕ ಕೇಳಿಕೊಂಡಾಗಲೂ ಅಂಥ ಲಿಖಿತ ಕೋರಿಕೆ ತಲುಪಿದ ಒಂದು ತಿಂಗಳೊಳಗಾಗಿ ಆಡಳಿತ ಸಮಿತಿಯವರು ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯತಕ್ಕದ್ದು.

13. ಸರ್ವ ಸದಸ್ಯರ ಸಭೆ ಕರೆಯುವ ಮತ್ತು ಅನುಸರಿಸುವ ವಿಧಾನಗಳು :

(1) ಆಡಳಿತ ಸಮಿತಿಯವರು ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿ ಓಟು (ಮತ) ಕೊಡಬಹುದಾದ ಸದಸ್ಯರ ಪಟ್ಟಿಯನ್ನು ತಯಾರಿಸತಕ್ಕದ್ದು. ಸರ್ವ ಸದಸ್ಯರ ಸಭೆಗೆ 15 ದಿನಗಳ ಮೊದಲೇ ಈ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಸಂಘದ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಐದನೇ ಎರಡರಷ್ಟು ಅಥವಾ 25 ಸದಸ್ಯರು ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಸಂಖ್ಯೆಯು ಸರ್ವ ಸದಸ್ಯರ ಸಭೆಗೆ ಕೋರಂ ಆಗಿರತಕ್ಕದ್ದು.

(3) ವಾರ್ಷಿಕ ಅಥವಾ ವಿಶೇಷ ಸರ್ವ ಸದಸ್ಯರ ಸಭೆ ಕರೆಯಲು ಲಿಖಿತ ಮೂಲಕ ನೋಟೀಸನ್ನು ಸಂಘದ ಆಫೀಸಿನ ಹೊರಭಾಗದಲ್ಲೂ ಮತ್ತು ಪ್ರಾಮುಖ್ಯವಾದ ಸ್ಥಳದಲ್ಲಿಯೂ ಪ್ರಕಟಿಸಬೇಕಲ್ಲದೆ, ಸಂಘದ ಪ್ರತಿಯೊಬ್ಬ ಸದಸ್ಯನಿಗೂ ಆತನು ಸಂಘಕ್ಕೆ ಕೊಟ್ಟಿರುವ ವಿಳಾಸಕ್ಕೆ ಲಿಖಿತ ಮೂಲಕ ಸಭೆ ನಡೆದ ದಿನದ 15 ದಿನಗಳ ಮುಂಚಿತವಾಗಿ ಕಳುಹಿಸಬೇಕು. ಸದರಿ ನೋಟಿಸನ್ನು ಟಪಾಲು ಮೂಲಕ ಕಳುಹಿಸಿದಲ್ಲಿ ಅಂಚೆ ಸರ್ಟಿಫಿಕೇಟನ್ನು ಪಡೆದಿರಬೇಕು, ನೋಟೀಸಿನಲ್ಲಿ ಸಭೆಯನ್ನು ಕರೆದಿರುವ ತಾರೀಖು, ದಿವಸ, ಕಾಲ ಮತ್ತು ಸ್ಥಳವನ್ನು ನಿಖರವಾಗಿ ನಮೂದಿಸುವುದಲ್ಲದೆ ಸಭೆಯಲ್ಲಿ ನಡೆಸುವ ಕಾರ್ಯ ಕಲಾಪಗಳ ಪಟ್ಟಿಯನ್ನು ನಮೂದಿಸಿರಬೇಕು.

(4) ಸರ್ವ ಸದಸ್ಯರ ಸಭೆಯ ನೋಟೀಸಿನ ಜಾರಿ ಕ್ರಮದಲ್ಲಿ ನ್ಯೂನತೆಯಿದ್ದಿತೆಂಬ ಕಾರಣವೊಂದರಿಂದಲೇ ಸಭೆಯ ತೀರ್ಮಾನಗಳು ಅಸಿಂಧುವಾಗುವುದಿಲ್ಲ.

(5) ವಾರ್ಷಿಕ ಮತ್ತು ವಿಶೇಷ ಸರ್ವ ಸದಸ್ಯರ ಸಭೆಗಳ ನಡಾವಳಿಕೆಗಳನ್ನು ಮತ್ತು ತೀರ್ಮಾನಗಳನ್ನು ಅದಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ಕಾರ್ಯದರ್ಶಿಯು ಬರೆದು ಆದಕ್ಕೆ ಸಭೆಯ ಅಧ್ಯಕ್ಷರ ಸಹಿಯನ್ನು ಪಡೆಯತಕ್ಕದ್ದು.

(6) ಸರ್ವ ಸದಸ್ಯರ ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳ ಸಹಿಯನ್ನು ನಡುವಳಿಕೆಯ ಪುಸ್ತಕದಲ್ಲಾಗಲಿ ಅಥವಾ ಬೇರೊಂದು ಪುಸ್ತಕದಲ್ಲಾಗಲಿ ಪಡೆದು ಹಾಜರಿದ್ದ ಸದಸ್ಯರ ಸಂಖ್ಯೆಯನ್ನು ನಮೂದಿಸತಕ್ಕದ್ದು,

(7) ಸರ್ವ ಸದಸ್ಯರ ಸಭೆಯು ಕರೆಯಲ್ಪಟ್ಟು ಕಾರ್ಯಕ್ರಮವು ಪೂರ್ತಿಯಾಗದೆ ಇದ್ದ ಪಕ್ಷದಲ್ಲಿ, ಆ ಸಭೆಯನ್ನು ಮತ್ತೊಂದು ದಿವಸಕ್ಕೆ ಮುಂದುವರಿಸಬಹುದು. ಮುಂದುವರಿಸಿದ ಸರ್ವ ಸದಸ್ಯರ ಸಭೆಗೆ ಬೇರೆ ಇನ್ನೊಂದು ನೋಟೀಸಿನ ಅವಶ್ಯಕತೆಯಿರುವುದಿಲ್ಲ; ಆದರೆ ಸಂಘದ ನೋಟೀಸು ಬೋರ್ಡಿನಲ್ಲಿ ಪ್ರಕಟಿಸಬೇಕು. ಇಂಥ ಮುಂದುವರಿಸಲ್ಪಟ್ಟ ಸಭೆಯಲ್ಲಿ ಮೊದಲನೆ ಸಭೆಯ ಕಾರ್ಯಕ್ರಮದ ಪಟ್ಟಿಯಲ್ಲಿ ನಮೂದಿಸಲಾಗಿದ್ದ ಚರ್ಚೆಯಾಗದಿರುವ ವಿಷಯಗಳನ್ನು ಮಾತ್ರ ಪರಿಗಣಿಸತಕ್ಕದ್ದು.

(8) ಸರ್ವ ಸದಸ್ಯರ ಸಭೆಯ ತೀರ್ಮಾನಗಳನ್ನು ಬಹುಮತದಂತೆ ಕೈಗೊಳ್ಳತಕ್ಕದ್ದು. ಒಬ್ಬ ಸದಸ್ಯನಿಗೆ ಒಂದೇ ಓಟು ಇರತಕ್ಕದ್ದು; ಸಮವಾದ ಓಟುಗಳು ಬಂದ ಸಂದರ್ಭದಲ್ಲಿ ಅಧ್ಯಕ್ಷರಿಗೆ ನಿರ್ಧಾರಕ ಮತ ಇರತಕ್ಕದ್ದು. ಉಪನಿಯಮಗಳ ತಿದ್ದುಪಡಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರಲ್ಲಿ ಕನಿಷ್ಠ ಮೊತ್ತನೆ ಎರಡರಷ್ಟು ಸದಸ್ಯರ ಬಹುಮತದಿಂದ ಸ್ವೀಕೃತವಾಗತಕ್ಕದ್ದು.

(9) ಮುಂದ್ದತು ವಿಾರಿದ ಬಾಕಿದಾರ ಸದಸ್ಯನಿಗೆ ಮತದಾನ ಮಾಡುವ ಹಕ್ಕು ಇರುವುದಿಲ್ಲ.

ವಿವರಣೆ : ಬಾಕಿದಾರ ಸದಸ್ಯನಿಗೆ 2 (ಎರಡು) ತಿಂಗಳಿಗೆ ಕಡಿಮೆ ಇಲ್ಲದಷ್ಟು ಅವಧಿಯ ನೋಟೀಸು ಕೊಟ್ಟನಂತರ, ಸರ್ವ ಸದಸ್ಯರ ಸಭೆಯ ತಾರೀಖಿಗಿಂತ ಕನಿಷ್ಠಪಕ್ಷ 1 ತಿಂಗಳ ಮುಂಚೆ ಬಾಕಿ ಸಂಘಕ್ಕೆ ಕೊಡತಕ್ಕ ಯಾವುದೇ ಬಾಕಿಯನ್ನು ಕೊಡಲು ತಪ್ಪಿದರೆ, ಅವನು "ಮುದ್ದತು ವಿಾರಿದ ಬಾಕಿದಾರ" ನೆಂದು ನಿರ್ಣಯಿಸಲ್ಪಡುವನು. ಇಂಥವನಿಗೆ ಮತದಾನ ಮಾಡುವ ಹಕ್ಕು ಇರಲಾರದು.

(10) ಸರ್ವ ಸದಸ್ಯರ ಸಭೆಯ ಒಂದು ತೀರ್ಮಾನವನ್ನು ಆಯಾ ತೀರ್ಮಾನವಾಗಿರುವ 6 ತಿಂಗಳ ಅವಧಿಯೊಳಗಾಗಿ, ಅಸಿಸ್ಟೆಂಟ್ ರಿಜಿಸ್ಟ್ರಾರ್ ರವರ ಮಂಜೂರಾತಿ ವಿನಹ, ಮತ್ತೊಂದು ಸರ್ವಸದಸ್ಯರ ಸಭೆಯಲ್ಲಿ ರದ್ದುಪಡಿಸತಕ್ಕದ್ದಲ್ಲ.

14. ಆಡಳಿತ ಸಮಿತಿ :

ಅ) ಸಂಘದ ಆಡಳಿತವನ್ನು ನಿರ್ವಹಿಸಲು 11 ಸದಸ್ಯರನ್ನೊಳಗೊಂಡ ಆಡಳಿತ ಸಮಿತಿಯು ಇರತಕ್ಕದ್ದು ಮತ್ತು ಈ ಸಮಿತಿಯಲ್ಲಿ ಕೆಳಕಂಡಂತೆ ಪ್ರತಿನಿಧಿಗಳಿರಬೇಕು :

(1) ಸಣ್ಣ ಮತ್ತು ಅತಿ ಸಣ್ಣ ರೈತ ಸದಸ್ಯರ ಪ್ರತಿನಿಧಿಗಳಾಗಿ ತಮ್ಮೊಳಗಿಂದ ಚುನಾಯಿಸಲ್ಪಡತಕ್ಕ ನಾಲ್ಕು ಜನ ಸದಸ್ಯರು.

ವಿವರಣೆ : ಕಾಲಕಾಲಕ್ಕೆ ರಿಜಿಸ್ಟ್ರಾರ್‌ರವರು ಸೂಚಿಸಲ್ಪಡುವ ರೈತರನ್ನು ಸಣ್ಣ ರೈತರೆಂದು ಮತ್ತು ಅತಿ ಸಣ್ಣ ರೈತರೆಂದು ಪರಿಗಣಿಸತಕ್ಕದ್ದು.

(2) ಹರಿಜನ–ಗಿರಿಜನ ಸದಸ್ಯರ ಪ್ರತಿನಿಧಿಯಾಗಿ ತಮ್ಮೊಳಗಿಂದ ಚುನಾಯಿಸಲ್ಪಡುಕ್ಕ ಒಬ್ಬ ಸದಸ್ಯ.

(3) ಇತರ ಸದಸ್ಯರಿಂದ (ಅಂದರೆ ಮೇಲೆ ನಮೂದಿಸಿರುವ 1 ಮತ್ತು 2ನೇ ಸದಸ್ಯರನ್ನು ಹೊರತು ಪಡಿಸಿ) ತಮ್ಮೊಳಗಿಂದ ಚುನಾಯಿಸಲ್ಪಡತಕ್ಕ ನಾಲ್ಕು ಜನ ಸದಸ್ಯರು.

(4) ಸಹಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಒಬ್ಬ ಪ್ರತಿನಿಧಿಯಾಗಿ ಆ ಭಾಗದ ಗ್ರಾಮಸೇವಕ.

(5) ಹಣ ಪೂರೈಸುವ ಸಂಸ್ಥೆಯ ಒಬ್ಬ ಪ್ರತಿನಿಧಿಯಾಗಿ ಸಹಕಾರಿ ಸಂಸ್ಥೆಯ ಆ ಭಾಗದ ಸೂಪರ್‌ವೈಸರ್ / ಇನಸ್ಪೆಕ್ಟರ್.

(ಬ) ಆಡಳಿತ ಸಮಿತಿಯು ಸದಸ್ಯರ ಚುನಾವಣೆಗಾಗಿ ಸಣ್ಣ ರೈತ ಮತ್ತು ಅತಿ ಸಣ್ಣ ರೈತ ಸದಸ್ಯರ, ಹರಿಜನ–ಗಿರಿಜನ ಸದಸ್ಯರ ಮತ್ತು ಇತರ ಸದಸ್ಯರ ಪ್ರತ್ಯೇಕ ಪಟ್ಟಿಗಳನ್ನು ತಯಾರಿಸತಕ್ಕದ್ದು.

(ಕ) ಆಡಳಿತ ಸಮಿತಿಯ ಅವಧಿಯು ಒಂದು ವರ್ಷ ಅಥವಾ ಮುಂದಿನ ಸಾಮಾನ್ಯ ಸಭೆಯು ಅಯ್ಕೆಯಾಗಿ ಆದು ಕಾರ್ಯ ನಿರ್ವಹಿಸುವವರೆಗೆ ಅಸ್ತಿತ್ವದಲ್ಲಿರತಕ್ಕದ್ದು.

(ಡ) ಆಡಳಿತ ಸಮಿತಿಯು ತಮ್ಮೊಳಗೆ ಒಬ್ಬರನ್ನು ಅಧ್ಯಕ್ಷರ[illegible] ಪ್ರತಿನಿಧಿಸುವಂತೆ ಚುನಾಯಿಸತಕ್ಕದ್ದು.

(ಇ) ಮೇಲಿನ ನಿಯಮಗಳಲ್ಲಿ ಏನಿದ್ದರೂ ಸಹಕಾರಿ ಸಂಘಗಳ ರಿಜಿಸ್ಟ್ರಾರರವರು ಈ ಉಪ ನಿಯಮಗಳನ್ನು ನೋಂದಾಯಿಸಲ್ಪಟ್ಟಂದಿನಿಂದ ಮೊದಲ ಮೂರು (3) ವರ್ಷಗಳ ಕಾಲ ಆಡಳಿತ ಸಮಿತಿಯ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ನಾಮಕರಣ ಮಾಡತಕ್ಕದ್ದು. ಹೀಗೆ ನಾಮಕರಣ ಮಾಡಲ್ಪಟ್ಟ ಸದಸ್ಯರಲ್ಲಿ, ಯಾವ ಒಬ್ಬ ಸದಸ್ಯನನ್ನಾಗಲಿ ಅಧ್ಯಕ್ಷರನ್ನಾಗಲಿ ಯಾವ ಕಾರಣವನ್ನೂ ನೀಡದೆ, ಸಹಕಾರಿ ಸಂಘಗಳ ಜಂಟಿ ರಿಜಿಸ್ಟ್ರಾರರು ಬದಲಾವಣೆ ಮಾಡಲು ಅಧಿಕಾರ ಹೊಂದಿರುತ್ತಾರೆ. ಹೀಗೆ ಯಾವ ಕಾರಣದಿಂದಾದರೂ ನಾಮಕರಣ ಮಾಡಿದ ಸದಸ್ಯರ ಸ್ಥಳಗಳು ತೆರವಾದರೆ, ಅವನ್ನು ಸಹಕಾರಿ ಸಂಘಗಳ ಜಂಟಿ ರಿಜಿಸ್ಟ್ರಾರರು ಭರ್ತಿ ಮಾಡಬೇಕು.

(ಫ) (1) ಆಡಳಿತ ಸಮಿತಿಯ ಸಭೆಯು ಅಧ್ಯಕ್ಷತೆಯನ್ನು ಸಾಮಾನ್ಯವಾಗಿ ಅಧ್ಯಕ್ಷರು ವಹಿಸತಕ್ಕದ್ದು. ಅವರು ಗೈರು ಹಾಜರಿಯಲ್ಲಿ ಸಮಿತಿಯು ತನ್ನ ಸದಸ್ಯರಲ್ಲಿ ಒಬ್ಬರನ್ನು ಸಭೆಯ ಅಧ್ಯಕ್ಷತೆ ವಹಿಸಲು ಆರಿಸಬೇಕು.

(2) ಸಭೆಯ ಕಾರ್ಯಕಲಾಪಗಳು ವಿಧಿವತ್ತಾಗಿ ನಡೆಯಲು ಸಮಿತಿಯ ಕಾಲು ಭಾಗದಷ್ಟು (ಸಿಕ್ಕರು) ಹಾಜರಿರತಕ್ಕದ್ದು.

(3) ಸಭೆಯ ವಿಷಯಗಳ ಬಗ್ಗೆ ಸಮವಾದ ಮತಗಳು ಬಂದ ಸಂದರ್ಭದಲ್ಲಿ ಮಾತ್ರ ಅಧ್ಯಕ್ಷರಿಗೆ ತಮ್ಮ ಮತದ ಜೊತೆಗೆ ಮತ್ತೊಂದು ನಿರ್ಣಾಯಕ ಮತವಿರತಕ್ಕದ್ದು.

(4) ಆಡಳಿತ ಸಮಿತಿಯ ಸದಸ್ಯರುಗಳಿಗೆ ಸಭೆಯ ನೋಟೀಸನ್ನು ಸಾಮಾನ್ಯವಾಗಿ ಸಭೆ ನಡೆಯುವ ದಿನದ ಕನಿಷ್ಠ ಐದು ದಿನಗಳ ಮೊದಲೇ ಕಳುಹಿಸತಕ್ಕದ್ದು. ಸಭೆಯಲ್ಲಿ ನಡೆದ ಎಲ್ಲಾ ವಿಷಯಗಳನ್ನು ಅಧಿಕೃತ ಸಿಬ್ಬಂದಿಯವರಿಂದ ಬರೆದು ಸಭೆಯ ಅಧ್ಯಕ್ಷರ ರುಜು ಪಡೆದು ತಕ್ಕದ್ದು.

(ಗ) (1) ಆಡಳಿತ ಸಮಿತಿಯ ಯಾವುದೇ ಸದಸ್ಯರು ಸತತವಾಗಿ ಮೂರು ಸಭೆಗಳಿಗೆ ಸತತವಾಗಿ ಸಕಾರಣವಿಲ್ಲದೆ ಗೈರು ಹಾಜರಾದ ಪಕ್ಷದಲ್ಲಿ, ಅಂಥವನಿಗೆ 15 ದಿನಗಳ ನೋಟೀಸು ಕೊಟ್ಟು ಅವನಿಂದ ವಿವರಣೆಗಳನ್ನು ಬೇಡಿಕೆಯಿಡತಕ್ಕದ್ದು. ಕಾರಣವು ಸೂಕ್ತವಾಗಿಲ್ಲವೆಂದು ಕಂಡುಬಂದಲ್ಲಿ, ಆಡಳಿತ ಸಮಿತಿಯು ಅವನನ್ನು ನಿವೃತ್ತಿಮಾಡತಕ್ಕದ್ದು.

(2) ಯಾವುದೇ ಸಂದರ್ಭದಲ್ಲಿ ಸಮಿತಿಯ ಸದಸ್ಯರ ಸ್ಥಾನ ಖಾಲಿಯಾದಲ್ಲಿ ಸಮಿತಿಯವರು ಯಾವ ಗುಂಪಿನ ಸದಸ್ಯರ ಸ್ಥಾನ ಖಾಲಿಯಾಯಿತೋ ಅದೇ ಗುಂಪಿನಿಂದ ಯಾರಾದರೂ ಒಬ್ಬರನ್ನು ನಾಮನಿರ್ದೇಶನ ಮಾಡಿಕೊಳ್ಳಬಹುದು.

15. ಆಡಳಿತ ಸಮಿತಿಯ ಕರ್ತವ್ಯ ಹಾಗೂ ಅಧಿಕಾರ :

ಸಂಘದ ಆಡಳಿತ ಸಮಿತಿಯ ಕರ್ತವ್ಯ ಮತ್ತು ಅಧಿಕಾರಗಳು ಈ ಕೆಳಗಿನಂತಿರಬೇಕು.

(1) ಸದಸ್ಯತ್ವಕ್ಕೆ ಬಂದ ಅರ್ಜಿಗಳನ್ನು ವಿಲೇವಾರಿಮಾಡುವುದು.

(2) ಸಂಘವನ್ನು ನಡೆಸಲು ತಿಜೋರಿಯಲ್ಲಿ ಇರಬೇಕಾದ ಹಣವನ್ನು ಉಳಿಸಿಕೊಂಡು ಮತ್ತು ಸಾಲಗಳ ಮೂಲಕ ಹಣೆಯುವುದು.

(3) ಸದಸ್ಯರುಗಳಿಂದ ಬಂದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಸಾಲಗಳನ್ನು ಮಂಜೂರುಮಾಡುವುದು ಮತ್ತು ಕಾಲಕಾಲಕ್ಕೆ ಬಡ್ಡಿ ದರವನ್ನು ನಿರ್ಧರಿಸುವುದು.

(4) ಸದಸ್ಯರುಗಳಿಗೆ ಹೈನದ ದನ (ಎಮ್ಮೆ—ಹಸು—ಆಕಳು), ಹೋರಿ–ಎತ್ತುಗಳು, ಕೋಳಿ–ಕುರಿಗಳನ್ನು ಒದಗಿಸುವುದು ಅಥವಾ ಅವನ್ನು ಕೊಳ್ಳಲು ಸಾಲವನ್ನು ಕೊಡುವುದು.

(5) ಆಯಾ ಸಾಲದ ಉದ್ದೇಶಕ್ಕೆ ಅನುಗುಣವಾಗಿ ಸಾಲವನ್ನು ವಾಪಸ್ಸುಪಡೆಯುವ ಅವಧಿಯನ್ನು ನಿರ್ಧರಿಸುವುದು.

(6) ಸಾಲದ ವಿನಿಯೋಗವನ್ನು ಪರಿಶೀಲಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು, ಸಾಲವನ್ನು ವಾಪಸ್ಸು ಪಡೆಯುವುದು ಅಥವಾ ಸೂಕ್ತ ಕಂಡಲ್ಲಿ ವಾಯಿದೆ ಹೆಚ್ಚಿಸುವುದು.

(7) ಸದಸ್ಯರ ಷೇರು ದರಖಾಸ್ತುಗಳನ್ನು ಮಂಜೂರು ಮಾಡುವುದು ಮತ್ತು ಷೇರು ಹಂಚುವುದು.

(8) ಸದಸ್ಯರುಗಳಿಗೆ ಬೇಕಾದ ಬೀಜದ ತಳಿಗಳು, ಮೇವು ವಗೈರೆಗಳನ್ನು ಒಟ್ಟಾಗಿ ಕೊಂಡು ಮಾರುವುದು.

(9) ಸಂಘದ ಅಭಿವೃದ್ಧಿಗೆ ಅವಶ್ಯಕವಾಗಿ ಬೇಕಾದ ಕಟ್ಟಡಗಳನ್ನು ಕಟ್ಟಿಸುವುದು, ಬಾಡಿಗೆಗೆ ಪಡೆಯುವುದು, ರಿಪೇರಿ ಮಾಡಿಸುವುದು.

(10) ಸಂಘದ ಕಾರ್ಯ ಚಟುವಟಿಕೆಗಳ ವಿಸ್ತರಣೆಗಾಗಿ ಶಾಖೆಗಳನ್ನು ತೆರೆಯುವುದು.

(11) ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ವಿಶೇಷ ಸರ್ವ ಸದಸ್ಯರ ಸಭೆಗಳನ್ನು ಕರೆಯುವುದು.

(12) ಆಡಿಟರ್ ವರದಿ, ಇಲಾಖೆಯವರ ತನಿಖಾ ವರದಿ ಹಾಗೂ ಬ್ಯಾಂಕಿನ (ಹಣ ಪೂರೈಸುವ ಸಂಸ್ಥೆ) ತನಿಖೆ ವರದಿಗಳನ್ನು ಸೂಕ್ತ ಸಮಜಾಯಿಷಿಯೊಂದಿಗೆ ಸರ್ವಸದಸ್ಯರ ಸಭೆಗೆ ತರುವುದು.

(13) ಪ್ರತಿ ಸಾಲಿನ ಜಮಾ–ಖರ್ಚು, ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಸರ್ವ ಸದಸ್ಯರ ಮಂಜೂರಾತಿಗೆ ಇಡುವುದು.

(14) ಸರ್ವ ಸದಸ್ಯರ ಸಭೆಯು ಮಂಜೂರಾತಿ ಪಡೆದ ಖರ್ಚಿನ ಪರಿಮಿತಿಗೊಳಪಟ್ಟು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಪೂರ್ವ ಸಮ್ಮತಿ ಪಡೆದು, ಕಾರ್ಯದರ್ಶಿ ಮತ್ತು ಇತರ ಸಿಬ್ಬಂದಿಗಳನ್ನು ನೇಮಕ ಮಾಡುವುದು ಮತ್ತು ಅವರ ವೇತನ ಶ್ರೇಣಿಗಳನ್ನು ಆಗಾಗ್ಗೆ ಗೊತ್ತುಪಡಿಸುವುದು ಹಾಗೂ ಅವರ ಸೇವಾ ನಿಯಮಗಳನ್ನು ನಿರ್ಧರಿಸುವುದು.

(15) ಸರ್ವ ಸದಸ್ಯರ ಸಭೆಯ ಮಂಜೂರಾತಿ ಪಡೆದ ಹಣದ ಪರಿಮಿತಿಗೊಳಪಟ್ಟು ಸಂಘವನ್ನು ನಡೆಸಲು ಅಗತ್ಯವಾದ ಖರ್ಚುಗಳನ್ನು ಮಾಡುವುದು.

(16) ಸಂಘದ ಕಾರ್ಯಗಳನ್ನು ನಡೆಸುವಲ್ಲಿ ಅವಶ್ಯಕವಾಗಿ ಬೇಕಾದ ಒಳನಿಬಂಧನೆ ತಯಾರಿಸುವುದು ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಮಂಜೂರಾತಿಯನ್ನು ಪಡೆದ ನಂತರ ಅವುಗಳನ್ನು ಜಾರಿಗೆ ತರುವುದು.

(17) ಸಂಘದ ಉದ್ದೇಶಗಳಿಗನುಗುಣವಾಗಿ ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಲು ಉಪಸಮಿತಿಗಳನ್ನು ನೇಮಿಸಬಹುದು.

(18) ಸಂಘದಲ್ಲಿನ ಸಿಬ್ಬಂದಿ ವರ್ಗದವರಿಂದ ಅವರವರ ಕಾರ್ಯಕ್ಕನುಗುಣವಾಗಿ ಸೂಕ್ತ ಭದ್ರತೆ ಮತ್ತು ಠೇವಣಿಗಳನ್ನು (ಸೆಕ್ಯುರಿಟೀಸ್ ಅಂಡ್ ಡಿಪಾಸಿಟ್ಸ್) ಗೊತ್ತುಪಡಿಸುವುದು.

(19) ಸಂಘದ ಉದ್ದೇಶಗಳನ್ನನುಸರಿಸಿ ಸಂಘದ ಏಳಿಗೆಗೆ ಅಗತ್ಯವಾದ ಮತ್ತು ಪೂರಕವಾದ ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

16. ಆಡಳಿತ ಸಮಿತಿಯ ಸದಸ್ಯತ್ವದ ಅರ್ಹತೆಗಳು :

(1) ಯಾವ ವ್ಯಕ್ತಿಯೂ ಈ ಕೆಳಗಿನ ಪ್ರಸಂಗಗಳಲ್ಲಿ ಸಮಿತಿಯ ಸದಸ್ಯನಾಗಿ ಆಯ್ಕೆ ಆಗಲು ಅಥವಾ ನೇಮಕಗೊಳ್ಳಲು ಅಥವಾ ಮುಂದುವರಿಯಲು ಸಾಧ್ಯವಿಲ್ಲ :

(1) ಸಾಲಗಾರನಾಗಿ ಅಥವಾ ಜಾಮೀನುದಾರನಾಗಿ ಯಾವುದೇ ಸಹಕಾರಿ ಸಂಘಕ್ಕೆ, ಯಾವುದೇ ರೀತಿಯ ಸಂಸ್ಥಿ ಬಾಕಿದಾರನಾಗಿದ್ದರೆ—ಈ ಮೇಲಿನ ಉಪನಿಯಮದ ಮೇರೆಗೆ ಸಮಿತಿಯ ಸದಸ್ಯತ್ವಕ್ಕೆ ಅನರ್ಹತೆ ಪಡೆಯಲ್ಪಟ್ಟ ಸದಸ್ಯನು, ಮತ್ತೆ ಒಂದುವರ್ಷ ಕಾಲ ಸಂಘದ ಆಡಳಿತ ಸಮಿತಿಯ ಸದಸ್ಯನಾಗುವುದಕ್ಕೆ ಅವಕಾಶವಿಲ್ಲ.

(2) ಸಂಘವು ಒಂದು ಸಂಘದೊಂದಿಗೆ ಮಾಡಿಕೊಂಡ ಯಾವುದೇ ಒಡಂಬಡಿಕೆಯಲ್ಲಿ (ಕಂಟ್ರಾಕ್ಟ್) ಅಥವಾ ಸಂಘವು ಖಾಸಗಿಯಾಗಿ ಇಲ್ಲವೆ ಹರಾಜಿನಲ್ಲಿ ನಡೆಸುವ ಖರೀದಿ ಅಥವಾ ಮಾರಾಟದಲ್ಲಿ ಅಥವಾ ಸಂಘವು ನಡೆಸುವ (ಹಣ ಹೂಡಿಕೆ ಮತ್ತು ಸಾಲ ಎತ್ತುವಳಿ ಹೊರತು ಪಡಿಸಿ) ಯಾವುದೇ ಒಡಂಬಡಿಕೆ ಅಥವಾ ವ್ಯವಹಾರದಲ್ಲಿ ಅವನು ನೇರವಾಗಿ ಇಲ್ಲವೆ ಪರೋಕ್ಷವಾಗಿ ಸಂಬಂಧ ಹೊಂದಿದವನಾಗಿದ್ದರೆ,

(3) ಸಂಘವು ಅಥವಾ ಅದು ಸದಸ್ಯತ್ವ ಪಡೆದ ಇತರ ಸಂಘ ನಡೆಸುವಂಥ ವ್ಯವಹಾರವನ್ನು ಅವನು ಕೈಗೊಂಡಿದ್ದರೆ,

(4) ಸಂಘದ ಪರವಾಗಿ ಇಲ್ಲವೆ ಸಂಘದ ವಿರುದ್ಧವಾಗಿ ವಕೀಲನಾಗಿ ಅವನು ನೇಮಕಗೊಂಡಿದ ರೆ

(5) ಅವನು ಸಂಘದ ಇಲ್ಲವೆ ಅದರ ಹಣಕಾಸಿನ ಬ್ಯಾಂಕಿನ ನೌಕರನಾಗಿದ್ದರೆ,

(6) ಅವನು ಸಂಘದ ಯಾವುದೇ ನೌಕರನ ಸಮೀಪ ಸಂಬಂಧಿಯಾಗಿದ್ದರೆ,

ವಿವರಣೆ : ಈ ಕೆಳಗಿನವರನ್ನು ಸಮೀಪ ಸಂಬಂಧಿ ಎಂದು ಪರಿಗಣಿಸಲಾಗುವುದು :

(ಅ) ಗಂಡ, ಹೆಂಡತಿ ಮತ್ತು ಅವಿವಾಹಿತ ಮಗಳು,

(ಆ) ತಂದೆ, ತಾಯಿ, ಬೇರೆಯಾಗಿರದ ಕುಟುಂಬದ ಮಗ (ಅವಿಭಕ್ತ), ಅವಿಭಕ್ತ ಕುಟುಂಬದ ಅಣ್ಣ-ತಮ್ಮಂದಿರು, ಮತ್ತು ಅವಿವಾಹಿತ ಅಕ್ಕ-ತಂಗಿಯರು ಮತ್ತು

(ಇ) ಸಹಕಾರಿ ಸಂಘಗಳ ನಿಯಮಾವಳಿಯಲ್ಲಿ ಗೊತ್ತುಪಡಿಸಲಾಗುವ ಇತರ ಸಂಬಂಧಿಗಳು

ಈ ಬಗ್ಗೆ ಯಾವುದೇ ತಕರಾರು ಬಂದಲ್ಲಿ ಸಮೀಪದ ಬಂಧು ಯಾರು ಎಂಬುದನ್ನು ನಿರ್ಣಯಿಸಲು ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ್‌ರವರಿಗೆ ಅಂತಿಮ ಅಧಿಕಾರವಿದ್ದು, ಅವರ ನಿರ್ಣಯವನ್ನು ಪಡೆಯಬೇಕು.

(2) ಸರಕಾರ ಇಲ್ಲವೆ ರಿಜಿಸ್ಟ್ರಾರರಿಂದ ನೇಮಕಗೊಂಡ, ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಅಥವಾ ಛೇರ್‌ಮನ್ ಅಥವಾ ವೈಸ್ ಛೇರ್‌ಮನ್ ಅಥವಾ ಮ್ಯಾನೇಜಿಂಗ್ ಡೈರೆಕ್ಟರ್ ಅಥವಾ ಇತರ ಅಧಿಕಾರಿ ಅಥವಾ (2) ಆಡಳಿತ ಸಮಿತಿಯ ಸದಸ್ಯರಿಗೆ ಮೇಲೆ ನಮೂದಿಸಿದ ಉಪನಿಯಮಗಳು ಅನ್ವಯಿಸುವುದಿಲ್ಲ.

(3) ಮೇಲೆ ಹೇಳಲಾದ ಯಾವುದೇ ಅನರ್ಹತೆಗಳಿಗೆ ಯಾವ ಒಬ್ಬ ಸದಸ್ಯನು ಒಳಗಾಗಿದ್ದಾನೆ ಇಲ್ಲವೆ ಒಳಗಾಗುವನೆಂಬುದರ ಬಗೆಗೆ ಏನಾದರೂ ಪ್ರಶ್ನೆ ತಲೆದೋರಿದಲ್ಲಿ ಅದನ್ನು ಡೆಪ್ಯುಟಿ ರಿಜಿಸ್ಟ್ರಾರ್‌ರವರ ನಿರ್ಣಯಕ್ಕೆ ಒಪ್ಪಿಸಬೇಕು.

(4) ಸಂಘದ ಅಧ್ಯಕ್ಷನು 6 ವರ್ಷಕ್ಕಿಂತ ಹೆಚ್ಚು ಅವಧಿಯವರೆಗೆ ಅಧ್ಯಕ್ಷನಾಗಿ ಮುಂದುವರಿಯಲಾರನು ಮತ್ತು ಅಂಥ ವ್ಯಕ್ತಿಯು ಆರು ವರ್ಷಗಳ ಕಾಲ ಅಧಿಕಾರದಲ್ಲಿದ್ದು ನಿವೃತ್ತನಾದರೆ ಮುಂದಿನ 6 ವರ್ಷಗಳವರೆಗೆ, ಅವನು ಆ ಸ್ಥಾನಕ್ಕೆ ಸ್ಪರ್ಧಿಸಲು ಬರುವುದಿಲ್ಲ.

17. ಅಧ್ಯಕ್ಷರು ಮತ್ತು ಅವರ ಕರ್ತವ್ಯ ಹಾಗೂ ಅಧಿಕಾರಗಳು :

ಆಡಳಿತ ಸಮಿತಿಯು ಅಧ್ಯಕ್ಷರಿಗೆ ಈ ಕೆಳಕಂಡ ಅಧಿಕಾರಗಳಿರುತ್ತವೆ.

(1) ಅಧ್ಯಕ್ಷರು ಸಂಘದ ವ್ಯವಹಾರದ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು.

(2) ಆಡಳಿತ ಸಮಿತಿ ಮತ್ತು ಸರ್ವಸದಸ್ಯರ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವುದು.

(3) ಸಂಘದ ಕಾರ್ಯದರ್ಶಿಯು ಮೇಲೆ ಮೇಲ್ವಿಚಾರಣೆ ಇಟ್ಟುಕೊಳ್ಳುವುದು.

18. ಕಾರ್ಯದರ್ಶಿ ಮತ್ತು ಅವರ ಕರ್ತವ್ಯ ಹಾಗೂ ಅಧಿಕಾರಗಳು :

(ಅ) ಸಂಘದಲ್ಲಿ ವೇತನ ಪಡೆಯುವ ಪೂರ್ಣಾವಧಿಯ ಕಾರ್ಯದರ್ಶಿ ಇರತಕ್ಕದ್ದು. ಅವರ ಕರ್ತವ್ಯ ಮತ್ತು ಅಧಿಕಾರಗಳು ಈ ಕೆಳಕಂಡಂತೆ ಇರುತ್ತವೆ.

(1) ಸಂಘದ ಲೆಕ್ಕಪುಸ್ತಕಗಳು, ದಾಖಲೆಗಳು, ಠರಾವು ಪುಸ್ತಕಗಳು, ಮತ್ತಿತರ ಹಣ ಮತ್ತು ಆಸ್ತಿಗಳು ಅವನ ವಶದಲ್ಲಿರತಕ್ಕದ್ದು.

(2) ಅವನು ಆಡಳಿತ ಸಮಿತಿಯ ಆದೇಶದ ಮೇರೆಗೆ ಸಂಘದ ಸರ್ವಸದಸ್ಯರ ಸಭೆಯನ್ನು ಕರೆಯತಕ್ಕದ್ದು.

(3) ಸಂಘದ ಆಡಳಿತ ಸಮಿತಿಯ ಸಭೆಯನ್ನು, ಅಧ್ಯಕ್ಷರೊಡನೆ ಸಮಾಲೋಚನೆ ಮಾಡಿ, ಕನಿಷ್ಠ ತಿಂಗಳಿಗೊಮ್ಮೆಯಾದರೂ ಕರೆಯಬೇಕು. ಆದರೆ ಸರ್ವಸದಸ್ಯರ ಸಭೆಯಲ್ಲಿ ಆಡಳಿತ ಮಂಡಳಿ ಚುನಾವಣೆಯಾದ 15 ದಿನಗಳೊಳಗಾಗಿ ಅಧ್ಯಕ್ಷರ ಚುನಾವಣೆಗೋಸ್ಕರ ಆಡಳಿತ ಸಮಿತಿಯ ಸಭೆಯನ್ನು ಕರೆಯತಕ್ಕದ್ದು ಮತ್ತು ಆ ಸಭೆಯ ನೋಟೀಸಿನ ಒಂದು ಪ್ರತಿಯನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಕಳಿಸತಕ್ಕದ್ದು ಮತ್ತು ಆ ಸಭೆಯ ಕಾರ್ಯಕಲಾಪಗಳನ್ನು ಸಭೆ ನಡೆಸಿದ ದಿನದಿಂದ 3 ದಿನದೊಳಗಾಗಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಕಳಿಸತಕ್ಕದ್ದು.

(4) ಸಂಘದ ಲೆಕ್ಕ ಪತ್ರಗಳನ್ನು ನಿರ್ದಿಷ್ಟಪಡಿಸಿದ ನಮೂನೆಗಳಲ್ಲಿ ಇಡತಕ್ಕದ್ದು ಮತ್ತು ಸಂಘದ ಕ್ಯಾಷ್ ಬುಕ್ಕಿಗೆ ಪ್ರತಿದಿನ ಸಹಿಮಾಡಬೇಕು

(5) ಸಂಘಕ್ಕೆ ಬರಬೇಕಾದ ಬಾಕಿಗಾಗಿ ಸಂಘದ ಪರವಾಗಿ ದಾವಾ ದಾಖಲು ಮಾಡಬಹುದು.

(6) ಸಂಘದ ಸಿಬ್ಬಂದಿಯ ಮೇಲೆ ಯೋಗ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ವಹಿಸತಕ್ಕದ್ದು.

(7) ಸಂಘದ ಪರವಾಗಿ ಕಾರ್ಯದರ್ಶಿಯು ಎಲ್ಲ ಪತ್ರ ವ್ಯವಹಾರಗಳನ್ನು ನಡೆಸತಕ್ಕದ್ದು.

(8) ಆಡಳಿತ ಸಮಿತಿಯವರು ಆಗಾಗ್ಗೆ ವಹಿಸಿಕೊಡುವ ಇತರ ಎಲ್ಲ ಕಾರ್ಯಗಳನ್ನು ನಿರ್ವಹಿಸಬೇಕು.

(9) ಸಂಘದ ವ್ಯವಹಾರದ ನಂತರ ಉಳಿಯುವ ನಗದು ಹಣವನ್ನು ತನ್ನ ವಶದಲ್ಲಿ ಇಟ್ಟುಕೊಳ್ಳತಕ್ಕದ್ದು. ಅವನು ನಗದು ಹಣವಾಗಿ ಪ್ರತಿ ದಿನದ ಕೊನೆಗೆ ಒಂದು ನೂರು (100) ರೂ. ಗಿಂತ ಹೆಚ್ಚಿಗೆ ಇಟ್ಟುಕೊಳ್ಳಕೂಡದು. ಹೆಚ್ಚುವರಿ ಹಣವನ್ನು ಬ್ಯಾಂಕಿಗೆ ಸಂಘದ ಖಾತೆಗೆ ಜಮಾ ಮಾಡತಕ್ಕದ್ದು.

(ಬ) ಈ ಉಪನಿಯಮದಲ್ಲಿ ಏನೇ ಹೇಳಲಾಗಿದ್ದರೂ, ಈ ಪುನರ್ಘಟಿತ ಸಂಘದ ಮೊದಲ ಪೂರ್ಣಾವಧಿಯ ವೇತನ ಕಾರ್ಯದರ್ಶಿಯನ್ನು ಜಿಲ್ಲೆಯ ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರು ನೇಮಕಮಾಡುವರು.

19. ಸಾಲ ಹಂಚುವ ವಿಧಾನ :

(1) ಸಾಲಗಳನ್ನು ಸದಸ್ಯರಿಗೆ ಮಾತ್ರ ಕೊಡಲಾಗುವುದು. ಆದರೆ ಠೇವಣಾತಿಗಳ ಆಧಾರದ ಮೇಲಿನ ಸಾಲಗಳನ್ನು ಸದಸ್ಯರಲ್ಲದವರಿಗೂ ಕೊಡಬಹುದು.

(2) ವ್ಯವಸಾಯಕ್ಕೆ ಬೇಕಾಗುವ ಸಾಲವನ್ನು ಸದಸ್ಯರಿಗೆ ನಗದು ರೂಪದಲ್ಲಿ ಇಲ್ಲವೆ ಬೀಜ, ಗೊಬ್ಬರ ಮುಂತಾದ ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ಇಲ್ಲವೆ ಎರಡೂ ವಿಧದಲ್ಲಿ ಕೊಡಬಹುದು.

(3) ಗೊತ್ತುಪಡಿಸಿದ ಜಾಮೀನಿನ ಮೇಲೆ ಸದಸ್ಯರಿಗೆ ಸಾಲ ಕೊಡಬಹುದು.

(4) ವ್ಯವಸಾಯ ಕಾರ್ಯಕ್ರಮಕ್ಕಾಗಿ ನೀಡುವ ಸಾಲಗಳನ್ನು ಸಾಲ ಪಡೆಯುವ ಸದಸ್ಯನಿಂದ ಅವನು ಉತ್ಪತ್ತಿ ಮಾಡಬಹುದಾದ ಬೆಳೆಯ ಆಧಾರದ ಮೇಲೆ ಕೊಡತಕ್ಕದ್ದು ಮತ್ತು ಅದಕ್ಕೆ ಕ್ರಮಪಡಿಸಿದ ರೀತಿಯಲ್ಲಿ ಕರಾರುಪತ್ರಗಳನ್ನು ಬರೆಯಿಸಿಕೊಳ್ಳತಕ್ಕದ್ದು,

(5) ಸಾಲಗಳನ್ನು ಸಾಮಾನ್ಯವಾಗಿ ಚೆಕ್ಕುಗಳ ಮುಖಾಂತರವಾಗಿ ಕೊಡತಕ್ಕದ್ದು.

(6) ಸದಸ್ಯರು ಪ್ರತಿ ಸಾಲಕ್ಕೂ ನಿಗದಿ ಪಡಿಸಿದ ನಮೂನೆಯಲ್ಲಿ ದರಖಾಸ್ತುಗಳನ್ನು (ಅರ್ಜಿ) ಆಡಳಿತ ಸಮಿತಿಯವರು ಪರಿಶೀಲನೆ ಮತ್ತು ಮಂಜೂರಾತಿಗಾಗಿ ಕಾರ್ಯದರ್ಶಿಗೆ ಸಲ್ಲಿಸಬೇಕು.

(7) ಬೆಳೆ ಸಾಲವನ್ನು ಹಂಚುವಾಗ ವಿವಿಧ ಬೆಳೆಗಳಿಗೆ ತಗಲುವ ಬೆಚ್ಚದ ಪ್ರಮಾಣ-ಪರಿಮಿತಿಗಳು, ಅಂತಹ ಸಾಲಗಳನ್ನು ಬಟವಾಡೆ ಮಾಡುವ ಕಂತುಗಳ ವಿವರ ಮತ್ತು ಬಟವಾಡೆ ಮಾಡುವ ಹಾಗೂ ಮರುಪಾವತಿ ಮಾಡುವ ಸಮಯ ಇತ್ಯಾದಿಗಳು ಸಾಲಕೊಡುವ ಬ್ಯಾಂಕುಗಳು ಕಾಲಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.

(8) ಜಮೀನು ಇಲ್ಲದ ಸದಸ್ಯರಿಗೆ ಅಂದರೆ ಕೃಷಿ ಕಾರ್ಮಿಕರು, ಕುಶಲ ಕರ್ಮಿಗಳು ಹಾಗೂ ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಜಾಮೀನು ಸಾಲಗಳನ್ನು ಹಣ ಪೂರೈಸುವ ಬ್ಯಾಂಕಿನವರು ಅಥವಾ ರಿಜಿಸ್ಟ್ರಾರ್‌ರವರು ನಿಗದಿಪಡಿಸಿದ ರೀತಿಯಲ್ಲಿ ಕೊಡಲಾಗುವುದು.

20. ಸಾಲಗಳು

ಈ ಕೆಳಗೆ ನಮೂದಿಸಿದ ಸಾಲಗಳನ್ನು ಸಂಘವು ಸದಸ್ಯರಿಗೆ ಕೊಡಬಹುದು :

(1) ಅಲ್ಪಾವಧಿ ಸಾಲ

(2) ಮಧ್ಯಮಾವಧಿ ಸಾಲ
(3) ಠೇವಣಾತಿಗಳ ಮೇಲೆ ಸಾಲ
(4) ಚಿನ್ನ-ಬೆಳ್ಳಿ ಆಭರಣಗಳ ಮೇಲೆ ಸಾಲ
(5) ಉತ್ಪತ್ತಿ ಈಡಿನ ಸಾಲ
(6) ಬಳಕೆ ಸಾಲ (ಕಂಸಮ್ಷನ್ ಫೈನಾನ್ಸ್)

1 ಅಲ್ಪಾವಧಿ ಸಾಲ:

ಅಲ್ಪಾವಧಿ ಸಾಲಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಕೊಡಲಾಗುವುದು:

(1) ಬೀಜ, ಗೊಬ್ಬರ, ಔಷಧಿ ಕ್ರಿಮಿನಾಶಕ, ವ್ಯವಸಾಯೋಪಕರಣಗಳನ್ನು ಕೊಳ್ಳಲು ಹಾಗೂ ಇತರ ವ್ಯವಸಾಯದ ಖರ್ಚಿಗಾಗಿ (ಅಂದರೆ ಬೆಳೆ ಸಾಲ)
(2) ದನಗಳಿಗೆ ಅವಶ್ಯಕವಾದ ಮೇವನ್ನು ಕೊಳ್ಳಲು
(3) ಗೃಹಕೈಗಾರಿಕೆಗಳಿಗೆ ಅವಶ್ಯಕವಾದ ಕಚ್ಚಾಮಾಲುಗಳನ್ನು ಕೊಳ್ಳಲು
(4) ರಿಜಿಸ್ಟ್ರಾರ್‌ರವರಿಂದ ನಿಗದಿಯಾದ ಪರಿಮಿತಿಗೊಳಪಟ್ಟು ನಿತ್ಯ ಜೀವನಕ್ಕೆ ಅವಶ್ಯಕವಾದ ಬಳಕೆ ಸಾಮಗ್ರಿ ವಗೈರೆಗಳನ್ನು ಕೊಳ್ಳಲು
(5) ಜಮೀನಿನ ಕಂದಾಯ ಕೊಡಲು
(6) ರಿಜಿಸ್ಟ್ರಾರ್‌ರವರಿಂದ ಆಗಿಂದಾಗ್ಗೆ ವಿಧಿಸಲ್ಪಡುವ ಇತರ ಅಲ್ಪಾವಧಿ ಉದ್ದೇಶಗಳಿಗಾಗಿ

2) ಮಧ್ಯಮಾವಧಿ ಸಾಲ:

ಮಧ್ಯಮಾವಧಿ ಸಾಲಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಕೊಡಲಾಗುವುದು:

(1) ಜಮೀನಿನ ಆಬಾದಿಗೆ
(2) ಒಡ್ಡು ಹಾಕಿಸುವುದು, ಕರಿಕೆ ತೆಗೆಸುವುದು ಮತ್ತು ಜಮೀನನ್ನು ಉತ್ತಮಪಡಿಸಲು ಸಹಾಯಕಾರಿಯಾಗುವ ಇತರ ಕಾರ್ಯಕ್ರಮಗಳಿಗಾಗಿ
(3) ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದು ಅಂದರೆ, ಬಾವಿ ತೆಗೆಸುವುದು, ಕಾಲುವೆ ಅಗೆಸುವುದು ಮತ್ತು ಪಂಪುಸೆಟ್ಟು ಮತ್ತು ನೀರಾವರಿ ಉಪಕರಣಗಳನ್ನು ಕೊಂಡುಕೊಳ್ಳಲು
(4) ಖುಷ್ಕಿ ಜಮೀನನ್ನು ತರೀ ಜಮೀನನ್ನಾಗಿ ಪರಿವರ್ತಿಸಲು ಮತ್ತು ಬಾಗಾಯ್ತು ವ್ಯವಸಾಯಕ್ಕೆ ಜಮೀನನ್ನು ಹದಮಾಡಲು
(5) ವ್ಯವಸಾಯಕ್ಕಾಗಿ ಜಮೀನು ಹದಮಾಡಲು ಬೇಕಾದ ದನ-ಕರುಗಳು, ಗಾಡಿ ಮತ್ತು ಇತರ ವ್ಯವಸಾಯ ಉಪಕರಣಗಳನ್ನು ಕೊಳ್ಳಲು
(6) ದನದ ಕೊಟ್ಟಿಗೆಗಳನ್ನು ಮತ್ತು ತೋಟದ ಮನೆಗಳನ್ನು ಕಟ್ಟಲು
(7) ರಿಜಿಸ್ಟ್ರಾರ್‌ರವರಿಂದ ಆಗಿಂದಾಗ್ಗೆ ವಿಧಿಸಲ್ಪಡುವ ಇತರ ಉದ್ದೇಶಗಳಿಗಾಗಿ

ವಿವರಣೆ: ಮಧ್ಯಮಾವಧಿ ಸಾಲದ ಅವಧಿಯು 3 ರಿಂದ 5 ವರ್ಷಗಳವರೆಗೆ ಇರತಕ್ಕದ್ದು. ಅದು ಅಮು. ವಾರ್ಷಿಕ ಕಂತುಗಳಲಿ ಹಿಂತಿರುಗಿಸಲ್ಪಡಬೇಕು.

3) ಠೇವಣಾತಿಗಳ ಮೇಲೆ ಸಾಲ:

ಈ ಕೆಳಗೆ ನಮೂದಿಸಿದ ಠೇವಣಾತಿಗಳ ಮೇಲೆ ಒಂದು ವರ್ಷ ವಾಯಿದೆ ಮೀರದಂತೆ ಸಾಲಗಳನ್ನು ಕೊಡಬಹುದು:

(1) ಸಾಲ ಕೇಳುವವನ ಹೆಸರಿನಲ್ಲಿ ಸಂಘದಲ್ಲಿ ಯಾವುದಾದರೂ ಠೇವಣಾತಿ ಇದ್ದರೆ, ಅದರ ಆಧಾರದ ಮೇಲೆ ಶೇಕಡಾ 80ಕ್ಕೆ ಮೀರದಷ್ಟು ಸಾಲವನ್ನು ಕೊಡಬಹುದು.

(2) ಸರಕಾರಿ ಪ್ರಾಮಿಸರಿ ನೋಟುಗಳು ಅಥವಾ ರಾಷ್ಟ್ರೀಯ ಉಳಿತಾಯ ಬ್ಯಾಂಕ್ ಠೇವಣಾತಿಗಳ ಆಧಾರದ ಮೇಲೆ ಅವುಗಳ ಮೊತ್ತದ ಶೇಕಡಾ 60ಕ್ಕಿಂತ ಹೆಚ್ಚಾಗದಷ್ಟು ಸಾಲವನ್ನು ಕೊಡಬಹುದು.

(3) ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕಿನ ಡಿಬೆಂಚರುಗಳ ಆಧಾರದ ಮೇಲೆ ಅಂಥ ಡಿಬೆಂಚರುಗಳ ಪೇಟೆ ಧಾರಣೆಯ ಶೇಕಡಾ 60ಕ್ಕೆ ಮೀರದಂತೆ ಸಾಲ ಕೊಡಬಹುದು.

4) ಚಿನ್ನ ಮತ್ತು ಬೆಳ್ಳಿ ಆಭರಣಗಳ ಮೇಲೆ ಸಾಲ:

ಸಂಘವು ಇಂಥ ಸಾಲಗಳ ಬಗ್ಗೆ ಸೂಕ್ತ ನಿಯಮಾವಳಿಗಳನ್ನು ರಚಿಸಿ, ಅವಕ್ಕೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಮನ್ನಣೆ ಪಡೆದು ಅದರಂತೆ ಈ ಸಾಲಗಳನ್ನು ಸದಸ್ಯರಿಗೆ ಒದಗಿಸಬಹುದು. ಇಂಥ ಸಾಲದ ಮಿತಿಯು ಹಣ ಪೂರೈಸುವ ಬ್ಯಾಂಕ್, ರಿಜರ್ವ್ ಬ್ಯಾಂಕ್ ಅಥವಾ ರಿಜಿಸ್ಟ್ರಾರ್‌ರವರ ಆದೇಶಕ್ಕೆ ಒಳಪಟ್ಟು ಇರತಕ್ಕದ್ದು.

5) ಉತ್ಪತ್ತಿ ಈಡಿನ ಸಾಲಗಳು (ಪ್ರಾಡ್ಯೂಸ್ ಲೋನ್ಸ್):

ಉತ್ಪತ್ತಿ ಈಡಿನ ಸಾಲಗಳು ಈ ಕೆಳಗೆ ಕಾಣಿಸಿದ ಕ್ರಮಗಳಿಗೆ ಒಳಪಟ್ಟಿರತಕ್ಕದ್ದು:

(1) ಈ ಸಾಲವು ಸಂಘಕ್ಕೆ ಈಡಿಟ್ಟ ಉತ್ಪತ್ತಿಗಳ ಪೇಟೆ ಧಾರಣೆ ಅಂದರೆ ಸಂಬಂಧಪಟ್ಟ ಗ್ರಾಮಗಳ ಪೇಟೆ ಧಾರಣೆಯ ಶೇಕಡಾ 70ರ ಮಿತಿಗೆ ಒಳಪಟ್ಟಿರಬೇಕು. ಧಾರಣೆಯ ಬಗ್ಗೆ ಕಾರ್ಯದರ್ಶಿಯು ಖಚಿತಪಡಿಸಿಕೊಂಡು ಸರ್ಟಿಫಿಕೇಟನ್ನು ಕೊಡಬೇಕು.

(2) ಈಡಿಟ್ಟ ಮಾಲಿನ ಪೇಟೆ ಧಾರಣೆಯನ್ನು ಆಗಾಗ ಪರಿಶೀಲಿಸುತ್ತಿರಬೇಕು. ಪೇಟೆ ಧಾರಣೆಯು ಕಡಿಮೆಯಾದರೆ ಸಾಲಗಾರನಿಂದ ಆ ಪ್ರಮಾಣದ ಮಟ್ಟಿಗೆ ಹೆಚ್ಚಿನ ಮಾಲನ್ನು ಅಥವಾ ಹಣವನ್ನು ಪಡೆಯಬೇಕು. ಇದಕ್ಕೆ ತಪ್ಪಿದಲ್ಲಿ ಸದ್ರಿ ಮಾಲಿನ ಮಾರಾಟದ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಇದರಿಂದಂಟಾಗುವ ಎಲ್ಲ ನಷ್ಟಗಳಿಗೆ ಸದ್ರಿ ಸಾಲಗಾರನೇ ಜವಾಬುದಾರನಾಗುತ್ತಾನೆ.

(3) ಮಾಲಂಗಳನ್ನು ಸಂಘದ ಸ್ವಂತ ಅಥವಾ ಬಾಡಿಗೆಗೆ ಪಡೆದುಕೊಂಡ ಉಗ್ರಾಣಗಳಲ್ಲಿ ಶೇಖರಿಸಬೇಕು. ಆದರೆ ಸದಸ್ಯರ ಉಗ್ರಾಣಗಳಲ್ಲಿ ಶೇಖರಿಸಲ್ಪಟ್ಟ ಉತ್ಪತ್ತಿಗಳ ಆಧಾರದ ಮೇಲೆ ಸಾಲ ಕೊಡಂವ ಪ್ರಸಂಗ ಬಂದಲ್ಲಿ, ಅಂಥ ಉಗ್ರಾಣಗಳ ವೇಲೆ ಸಂಘದ ಪೂರ್ತಿ ಹತೋಟಿ ಇರತಕ್ಕದ್ದು.

(4) ಈಡಿಟ್ಟ ಮಾಲನ್ನು ಸಾಲದ ಮರುಪಾವತಿಯಾದಂತೆ, ಆ ಪ್ರಮಾಣದಲ್ಲಿ ಬಿಡುಗಡೆ ಮಾಡಬಹುದು.

(5) ಮಾಲಂಗಳನ್ನು ಸುರಕ್ಷಿತವಾಗಿ ಶೇಖರಿಸಿಡಬೇಕು. ಧಾನ್ಯಗಳನ್ನು ಗೋಣಿ ಚೀಲಗಳಲ್ಲಿಯೂ ಮತ್ತು ಉಳಿದ ಸಾಮಾನುಗಳನ್ನು ಗೋಣಿ ಚೀಲ ಇಲ್ಲವೆ ಪೀಪಾಯಿಗಳಲ್ಲಿ (ಡ್ರಮ್‌ಗಳಲ್ಲಿ) ಶೇಖರಿಸಿಡಬೇಕು.

(6) ಪ್ರತಿ ಸದಸ್ಯನ ಮಾಲನ್ನು ಗುರುತಿಸಲು ಚೀಲಗಳು ಇಲ್ಲವೆ ಪೀಪಾಯಿಗಳ (ಡ್ರಮ್‌ಗಳ) ಮೇಲೆ ಚೀಟಿಗಳನ್ನು ಅಂಟಿಸಬೇಕು ಮತ್ತು ಅವುಗಳನ್ನು ಪ್ರತ್ಯೇಕವಾಗಿಡಬೇಕು.

(7) ಮಾಲು ಶೇಖರಿಸಿಟ್ಟ ಉಗ್ರಾಣಗಳನ್ನು ಬೆಂಕಿ ಮತ್ತು ಕಳವಿನ ಬಗ್ಗೆ ವಿಮೆ ಮಾಡಿಸತಕ್ಕದ್ದು.

(8) ಮಾಲುಗಳ ಭದ್ರತೆ ಮತ್ತು ನಷ್ಟದ (ಡೆಫಿಸಿಟ್) ಬಗ್ಗೆ ಉಂಟಾದ ಎಲ್ಲ ಖರ್ಚುಗಳಿಗೆ ಸಾಲಗಾರನೇ ಜವಾಬ್ದಾರನಾಗಿರುತ್ತಾನೆ.

(9) ಸಾಲದ ಮರುಪಾವತಿಯ ವಾಯಿದೆಯು 6 ತಿಂಗಳಿಗೆ ಮೀರಕೂಡದು.

(10) ಸಾಲಗಾರನು ಸಂಘದ ಹೆಸರಿನಲ್ಲಿ, ಗೊತ್ತುಪಡಿಸಿದ ರೀತಿಯಲ್ಲಿ, ಈಡಿಟ್ಟ ಮಾಲಿನ ವಿವರಗಳನ್ನೊಳಗೊಂಡ ಈಡು ಪತ್ರವನ್ನು ಮಾಡಿಕೊಡಬೇಕು.

(11) ಉಗ್ರಾಣದ ಆಡಳಿತದ ಜವಾಬ್ದಾರಿಯನ್ನು ಆಡಳಿತ ಸಮಿತಿ ನೇಮಿಸಿದ ಕಾರ್ಯದರ್ಶಿ ಅಥವಾ ಒಬ್ಬ ನೌಕರನಿಗೆ ವಹಿಸಿಕೊಡಬೇಕು. ಈತನು ಸಾಲಕ್ಕೆ ಸಂಬಂಧಪಟ್ಟ ಲೆಕ್ಕ–ಪತ್ರಗಳನ್ನು ಸರಿಯಾಗಿ ಇಡಲು ಜವಾಬ್ದಾರನಾಗಿರುತ್ತಾನೆ.

ಮೇಲ್ಕಾಣಿಸಿದ ಉತ್ಪತ್ತಿ ಈಡಿನ ಸಾಲವನ್ನು ಸಂಘದ ಸದಸ್ಯನಿಗೆ ಅವನು ಸಾಗುವಳಿ ಮಾಡಿದ ಜಮೀನಿನ ಉತ್ಪತ್ತಿಯ ಮೇಲೆ ಮಾತ್ರ ಕೊಡಬೇಕು. ಬಾಕಿಯಿದ್ದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳ ಕಂತುಗಳನ್ನು ಮುರಿದುಕೊಂಡು ಉಳಿಯುವ ಹಣವನ್ನು ಸಾಲವಾಗಿ ಕೊಡಬೇಕು. ಇತರರಿಂದ ತಂದು ಶೇಖರಿಸಿದ ಉತ್ಪತ್ತಿಗೆ ಇಂಥ ಸಾಲ ಕೊಡತಕ್ಕದ್ದಲ್ಲ.

6) ಬಳಕೆ ಸಾಲ :

ಇಂತಹ ಸಾಲಗಳನ್ನು ಸಂಘವು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಮನ್ನಣೆ ಪಡೆದ ಒಳನಿಬಂಧನೆಗಳಿಗೆ ಒಳಪಟ್ಟು ಸದಸ್ಯರಿಗೆ ಒದಗಿಸಬಹುದು ಇಂಥ ಸಾಲದ ಮಿತಿಯು ಹಣ ಪೂರೈಸುವ ಬ್ಯಾಂಕು ಇಲ್ಲವೆ ರಿಸರ್ವ್ ಬ್ಯಾಂಕು ಅಥವಾ ರಿಜಿಸ್ಟ್ರಾರ್‌ರವರ ಆದೇಶಕ್ಕೊಳಪಟ್ಟು ಇರತಕ್ಕದ್ದು.

21. ಸಾಲದೊಂದಿಗೆ ಮಾರಾಟದ ಸಂಯೋಜನೆ :

(1) ಬೆಳೆ ಸಾಲಗಳನ್ನು ಸದಸ್ಯರು ಸಾಮಾನ್ಯವಾಗಿ ಬೆಳೆದ ಉತ್ಪತ್ತಿಗಳ ಮೂಲಕ ಮರುಪಾವತಿ ಮಾಡತಕ್ಕದ್ದು ಇದಕ್ಕಾಗಿ ಪ್ರತಿ ಸದಸ್ಯನು ತಾನು ಬೆಳೆದ ಉತ್ಪತ್ತಿಗಳನ್ನು ಸಂಘಕ್ಕೆ ಕೊಡುವುದಾಗಿ ಬರವಣಿಗೆ ಮೂಲಕ ಒಪ್ಪಬೇಕು.

(2) ಬೆಳೆ ಸಾಲ ಪಡಕೊಂಡ ಸದಸ್ಯರಿಂದ ಮಾಲನ್ನು ವಸೂಲು ಮಾಡಲು ಸಂಘದ ಕಾರ್ಯದರ್ಶಿಗೆ ಅಧಿಕಾರ ಕೊಡತಕ್ಕದ್ದು.

(3) ಕಾರ್ಯದರ್ಶಿಯು ಸದಸ್ಯರಿಂದ ಮಾಲನ್ನು ತೆಗೆದುಕೊಳ್ಳುವ ಮತ್ತು ಅದನ್ನು ಮಾರಾಟ ಸಂಘಕ್ಕೆ ಕಳುಹಿಸುವ ಏರ್ಪಾಡು ಮಾಡಬೇಕು.

(4) ಅವನು ವಸೂಲು ಮಾಡಿದ ಮಾಲುಗಳ ಬಗ್ಗೆ ಎಲ್ಲಸದಸ್ಯರಿಗೆ ಅಧಿಕೃತ ರಶೀತಿಗಳನ್ನು ಕೊಡತಕ್ಕದ್ದು. ಮತ್ತು ಸದ್ರಿ ಮಾಲುಗಳನ್ನು ಮಾರಾಟ ಸಂಘದ ವಶಕ್ಕೊಪ್ಪಿಸಲು ಜವಾಬ್ದಾರನಾಗಿರುತ್ತಾನೆ.

(5) ಮಾಲುಂಗಳನ್ನು ಮಾರಾಟ ಸಂಘಕ್ಕೆ ಸಾಗಾಟ ಮಾಡುವ ಮತ್ತು ಇತರ ಖರ್ಚುಗಳನ್ನು ಸದಸ್ಯನೇ ವಹಿಸತಕ್ಕದ್ದು.

(6) ಮಾಲುಗಳನ್ನು ವಸೂಲು ಮಾಡುವ ಮುಂಚಿತವಾಗಿ ಸಂಘವು ಸದಸ್ಯರಿಂದ ಬರತಕ್ಕ ಸಾಲದ ತಃಖ್ತೆಯೊಂದನ್ನು ಮಾರಾಟ ಸಂಘಕ್ಕೆ ಕಳುಹಿಸಿ ಕೊಡತಕ್ಕದ್ದು.

ವಿವರಣೆ : ಸಂಘವು ಸದಸ್ಯರಿಂದ ಪಡೆದು ಕೂಡಿಟ್ಟ ಮಾಲುಗಳನ್ನು ಮಾರಾಟ ಸಂಘವು ಹೊಂದಿ ಅದನ್ನು ಅದಷ್ಟು ಹೆಚ್ಚಿನ ಕ್ರಯಕ್ಕೆ ಮಾರಾಟ ಆಗುವಂತೆ ಏರ್ಪಾಡು ಮಾಡಬೇಕು; ಅದು ಮಾಲನ್ನು ಪಡೆದ ಕೂಡಲೇ ಪೇಟೆಯ ಧಾರಣೆಯ ಶೇಕಡ 70ರಷ್ಟು ಹಣವನ್ನು ಆಯಾ ಸದಸ್ಯನಿಗೆ ಮುಂಜೂರು ಮಾಡಬೇಕು; ಹೀಗೆ ಮುಂಜೂರಾತಿಯಾದ ಈ ಸಾಲದಲ್ಲಿ ಸಂಘವು ಕಳಿಸಿಕೊಟ್ಟ ಸಾಲದ ತಃಖ್ತೆಯ ಪ್ರಕಾರ ಸದಸ್ಯನು ಕೊಡಬೇಕಾದ ಹಣವನ್ನು ಸಂಘದ ಲೆಕ್ಕಕ್ಕೆ ಸಂಬಂಧಿಸಿದ ಹಣ ಪೂರೈಸುವ ಬ್ಯಾಂಕಿಗೆ ಜಮಾ ಮಾಡಿ ಉಳಿಕೆ ಹಣವನ್ನು ಸಂಘಕ್ಕೆ ಕೊಡಬೇಕು; ಸಂಘವು ಪ್ರತಿ ಸದಸ್ಯರಿಂದ ಬರತಕ್ಕ ಆಳಿದ ಬಡ್ಡಿ ಮತ್ತು ಕಮಿಷನ್ ಇತ್ಯಾದಿ ಖರ್ಚುಗಳನ್ನು ಕಳೆದು ಉಳಿಕೆ ಹಣವನ್ನು ಆಯಾ ಸದಸ್ಯನಿಗೆ ಕೊಡಬೇಕು; ಮಾರಾಟ ಸಂಘವು ಈ ಸಂಘವು ಕಳಿಸಿದ ಮಾಲನ್ನು ಮಾರಾಟ ಮಾಡಿದ ಮೇಲೆ ಅದು ತಾನು ಕೊಟ್ಟ ಸಾಲ ಮತ್ತು ಬಡ್ಡಿ ವಗೈರೆಗಳನ್ನು ವಜಾಮಾಡಿಕೊಂಡು ಉಳಿದ ಹಣವನ್ನು ಸಂಘಕ್ಕೆ ಕೊಡತಕ್ಕದ್ದು; ಸಂಘವು ಆಯಾ ಸದಸ್ಯನಿಗೆ ಆ ಹಣವನ್ನು ಮುಟ್ಟಿಸುವುದು—ಈ ಕರಾರುಗಳಿಗೆ ಒಳಪಟ್ಟು ಸಾಲ ಮಾರಾಟ ಸಂಯೋಜನೆಯನ್ನು ಜಾರಿಗೆ ತರಲಾಗುವುದು.

22. ಸಾಲದ ಪರಮಾವಧಿ :

(1) ಪ್ರತಿ ಸದಸ್ಯನ ಸಾಲವು ತನ್ನ ಸ್ವಂತ ಸಾಲ ಮತ್ತು ತನ್ನ ಜಾಮೀನಿನ ಮೇಲೆ ಕೊಟ್ಟ ಸಾಲ ಇವೆರಡು ಕೂಡಿ 30,000 ರೂಗಿಂತ ಹೆಚ್ಚಿರಕೂಡದು. ಆದರೆ ಈ ಸಾಲದ ಪರಮಾವಧಿಯು ಉತ್ಪತ್ತಿ ಈಡಿನ ಸಾಲ (ಪ್ರಾಡ್ಯೂಸ್ ಲೋನ್ಸ್) ಚಿನ್ನ–ಬೆಳ್ಳಿ ಮೊದಲಾದ ಒಡವೆಗಳ ಮೇಲಿನ ಸಾಲ ಇವುಗಳಿಗೆ ಅನ್ವಯಿಸುವುದಿಲ್ಲ.

(2) ಯಾವೊಬ್ಬ ಸದಸ್ಯನು ಜಾಮೀನು ನಿಲ್ಲುವ ಸಾಲದ ಮೊತ್ತವು ತಾನು ಸಂಘದಲ್ಲಿ ಪಡೆದ ಒಟ್ಟು ಷೇರು ಪಣದ 16 ಪಟ್ಟಿಗೆ ಮೀರಿರ ಕೂಡದು.

23. ಸಾಲದ ಬಡ್ಡಿ :

(1) ಸಾಲಗಳ ಮೇಲಣ ಬಡ್ಡಿಯು ದರವು ವರ್ಷಕ್ಕೆ ಶೇಕಡಾ 20 ಕ್ಕಿಂತ ಮಿಗದಂತೆ ಆಡಳಿತ ಮಂಡಳಿಯವರು ನಿರ್ಧರಿಸಬೇಕು ಮತ್ತು ಬಡ್ಡಿಯನ್ನು ಸಾಲಗಳಿ ಕಂತುಗಳ ಜೊತೆಗೆ ಪಡೆಯಬೇಕು. ಆದರೆ ಬಡ್ಡಿಯನ್ನು ಯಾವುದೇ ಸಂದರ್ಭದಲ್ಲಿ ಚಕ್ರಬಡ್ಡಿ ರೀತಿಯಲ್ಲಿ ಆಕರಣೆ ಮಾಡ ಕೂಡದು.

(2) ಬಡ್ಡಿಯನ್ನು ಸಾಲ ಕೊಟ್ಟ ತಾರೀಖಿನಿಂದ ಸಾಲ ವಾಪಸ್ಸು ಮಾಡುವ ತಾರೀಖಿನವರೆಗೆ ಲೆಕ್ಕ ಹಾಕತಕ್ಕದ್ದು.

24. ಸಾಲದ ವಸೂಲಾತಿ :

(1) ಯಾವ ಸದಸ್ಯನೇ ಆಗಲಿ ತಾನು ಕೊಡಬೇಕಾದ ಬಾಕಿಗಳನ್ನು ಸುಸ್ತಿಯಲ್ಲಿಟ್ಟುಕೊಂಡ ಪಕ್ಷದಲ್ಲಿ ಅಂತಹ ಸದಸ್ಯನಿಗೆ ಯಾವ ಸಾಲ ವನ್ನೂ ಕೊಡತಕ್ಕದ್ದಲ್ಲ.

(2) ಯಾವ ಸದಸ್ಯನೇ ಆಗಲಿ ಕಂತು ಮೊಬಲಗನ್ನು ಮತ್ತು ಬಡ್ಡಿಯನ್ನು ನಿರ್ದಿಷ್ಟವಾದ ತಾರೀಖಿನಲ್ಲಿ ವಾಪಸ್ಸು ಮಾಡದೇ ಹೋದಲ್ಲಿ ಹಾಗೆ ವಾಯಿದೆ ಮೀರಿದ ತಾರೀಖಿನಿಂದ ವಸೂಲು ಆಗುವ ದಿನದವರೆಗೆ ಶೇಕಡಾ 3 ರಂತೆ ಸುಸ್ತಿಬಡ್ಡಿಯನ್ನು ವಿಧಿಸತಕ್ಕದ್ದು. ಹೀಗೆ ವಸೂಲಾದ ಸುಸ್ತಿ ಬಡ್ಡಿಯಲ್ಲಿ ಹಣ ಪೂರೈಸುವ ಬ್ಯಾಂಕಿಗೆ ಸುಸ್ತಿ ಬಡ್ಡಿ ಕೊಡಬೇಕಾಗಿದ್ದಲ್ಲಿ ಅದನ್ನು ಕೊಟ್ಟು ವಿುಕ್ಕಬಹುದಾದ ಮೊಬಲಗನ್ನು ಸಂಘದ ಕಾಯ್ದಿಟ್ಟ ನಿಧಿಗೆ ತೆಗೆದುಕೊಳ್ಳತಕ್ಕದ್ದು. ಸುಸ್ತಿ ಬಡ್ಡಿಯನ್ನು ಲಾಭಕ್ಕೆ ತೆಗೆದುಕೊಳ್ಳಬಾರದು.

(3) ಸಾಲವು ಸುಸ್ತಿಯಾದಲ್ಲಿ ಆಥವಾ ವಾಯಿದೆ ಹೆಚ್ಚಿಸಲು ನಿರಾಕರಿಸಲ್ಪಟ್ಟಲ್ಲಿ ಅಂತಹ ಸಾಲಗಾರರಿಗೂ ಮತ್ತು ಜಾಮೀನುದಾರರಿಗೂ ಲಿಖಿತ ಮೂಲಕ ನೋಟೀಸು ಕೊಡಬೇಕು. ಹೀಗೆ ಕೊಡಲ್ಪಟ್ಟ ನೋಟೀಸಿನಲ್ಲಿ ವಾಪಸ್ ಕೊಡುವ ಕಾಲಾವಧಿಯು ಮೂರು (3) ತಿಂಗಳಿಗೆ ಮಿಗದಂತೆ ಇರತಕ್ಕದ್ದು. ಈ ಮೇಲ್ಕಂಡ ಅವಧಿಯೊಳಗೆ ಹಣ ಪೂರ್ತಿಯಾಗಿ ಪಾವತಿಯಾಗದಿದ್ದಲ್ಲಿ ಅಂತಹ ಬಾಕಿದಾರರ ಮೇಲೆ ಕೂಡಲೇ ದಾವಾ ಕ್ರಮ ಜರುಗಿಸಬೇಕು. ಹೀಗೆ ದಾವಾ ಕ್ರಮ ಜರುಗಿಸದೆ ವಿಳಂಬ ಮಾಡಿದ ಕಾರಣದಿಂದ ಸಂಘಕ್ಕೆ ಉಂಟಾಗಬಹುದಾದ ನಷ್ಟಗಳಿಗೆ ಆಡಳಿತ ಸಮಿತಿಯವರು ಜವಾಬ್ದಾರರಾಗಿರುತ್ತಾರೆ.

(4) ದಾವಾ ಕ್ರಮ ಪಡೆದು ಡಿಕ್ರಿಯಾಗಿ, ಡಿಕ್ರಿಯಲ್ಲಿ ವಾಯಿದೆ ಕೊಟ್ಟಿರದಿದ್ದರೆ ಆಥವಾ ಡಿಕ್ರಿಯಂತೆ ಕಂತುಗಳು ಬಾರದಿದ್ದರೆ ಆಡಳಿತ ಸಮಿತಿಯವರು ಸದರಿ ಡಿಕ್ರಿಯನ್ನು ಅಮಲಾಜಾರಿಗೆ ಕೇಳಬೇಕು. ಹಾಗೆ ಮಾಡದೆ ವಿಳಂಬ ಮಾಡುವುದರಿಂದ ಸಂಘಕ್ಕೆ ಉಂಟಾಗಬಹುದಾದ ನಷ್ಟ ಗಳಿಗೆ ಆಡಳಿತ ಸಮಿತಿಯವರು ಜವಾಬ್ದಾರರಾಗಿರುತ್ತಾರೆ.

(5) ಜಾಮೀನ್ದಾರನು ಮೃತಪಟ್ಟಲ್ಲಿ ಆಥವಾ ಆಡಳಿತ ಸಮಿತಿಯವರ ಅಭಿಪ್ರಾಯದಲ್ಲಿ ಅನರ್ಹನಾದಲ್ಲಿ ಸಮಿತಿಯವರು 15 ದಿವಸ ಗಳೊಳಗಾಗಿ ಬೇರೊಬ್ಬ ಜಾಮೀನುದಾರನನ್ನು ಕೊಡುವಂತೆ ಆ ಸಾಲಗಾರನನ್ನು ಕೇಳಬಹುದು. ಈ ಅವಧಿಯಲ್ಲಿ ಬೇರೆ ಜಾಮೀನುದಾರನನ್ನು ಕೊಡದೆ ಹೋದಲ್ಲಿ ಸದರಿ ಸಾಲದ ವಸೂಲಾತಿಗೆ ಕೂಡಲೇ ಕ್ರಮ ತೆಗೆದುಕೊಳ್ಳತಕ್ಕದ್ದು.

(6) ಸದಸ್ಯನಿಂದ ಸಂಘಕ್ಕೆ ಪಾವತಿ ಮಾಡಲ್ಪಟ್ಟ ಹಣವನ್ನು ಈ ಕೆಳಗೆ ಕಂಡ ರೀತಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು :

(ಅ) ಮೊದಲನೆಯದಾಗಿ ಸದಸ್ಯನಿಂದ ಬರಬೇಕಾದ ನೋಟೀಸ್ ಮತ್ತು ಅಂಚೆ ಪೆಚ್ಚಗಳಂ ಮತ್ತು ಇತರ ಖರ್ಚುಗಳಿಗಾಗಿ

(ಬ) ಸುಸ್ತಿ ಬಡ್ಡಿಗಾಗಿ

(ಕ) ಬಡ್ಡಿಗಾಗಿ

(ಡ) ಅಸಲಿಗಾಗಿ

25. ಲಾಭ ಮತ್ತು ಅದರ ವಿಲೇವಾರಿ

ಅ) ಪ್ರತಿ ಸಾಲಾಖ್ಯೆರಿಗೆ ಲಾಭಗಳನ್ನು ಗೊತ್ತು ಮಾಡುವುದರಲ್ಲಿ ವಸೂಲಾದ ಬಡ್ಡಿ ಹಾಗೂ ಇತರ ಬಾಬುಗಳನ್ನು ಮಾತ್ರ ಲೆಕ್ಕಕ್ಕೆ ಸೇರಿಸಿ ಕೊಳ್ಳತಕ್ಕದ್ದು. ಕಾರ್ಯನಿರ್ವಾಹಕ್ಕಾಗಿ ತಗಲುವ ಖರ್ಚನ್ನು ಮತ್ತು ತೇವಣಾತಿಗಳ ಮೇಲೆ ಹಾಗೂ ಇತರ ಸಾಲಗಾರರಿಗೆ ಕೊಡತಕ್ಕ ಬಡ್ಡಿಯಂನ್ನು ಮೊದಲು ವಜಾ ಮಾಡಬೇಕು. ನಿವ್ವಳ ಲಾಭವನ್ನು ಗೊತ್ತುಮಾಡುವುದಕ್ಕೆ ಮೊದಲು ಸಂಘಕ್ಕೆ ಸೇರಿರುವ ಮೊತ್ತಗಳಂ ಮತ್ತು ಇತರ ಸಾಮಾನುಗಳ ಮೇಲೆ ಸವಕಳಿ (ಡಿಪ್ರಿಸಿಯೇಶನ್) ತೆಗೆಯಬೇಕು.

ಬ) ಹೀಗೆ ನಿರ್ಣಯಿಸಲ್ಪಟ್ಟ ನಿವ್ವಳ ಲಾಭವನ್ನು ಸರ್ವ ಸದಸ್ಯರ ಸಭೆಯವರು ಈ ಕೆಳಕಂಡಂತೆ ವಿಲೇವಾರಿ ಮಾಡತಕ್ಕದ್ದು :

(1) ಶೇ. 25ಕ್ಕೆ ಕಡಿಮೆ ಇಲ್ಲದಷ್ಟನ್ನು ಕಾಯ್ದಿಟ್ಟ ನಿಧಿಗೆ (ರಿಸರ್ವ್ ಫಂಡಿಗೆ) ತೆಗೆದಿರಿಸಬೇಕಂ.

(2) ನಂತರ ಉಳಿದ ಲಾಭದ ಪೈಕಿ ಪ್ರತಿಯೊಂದು ಷೇರಿನ ಬಾಬ್ತು ಪಾವತಿಯಾದ ಮೊತ್ತದ ಮೇಲೆ ಶೇಕಡಾ 9ಕ್ಕೆ ಮಿಗದ ಷೇರಂ ಲಾಭಾಂಶವನ್ನು (ಡಿವಿಡೆಂಡ್) ಹಂಚುವುದು ; ಮತ್ತು ಶೇ. 9 ಕ್ಕಿಂತ ಹೆಚ್ಚು ಹಾಗೂ ಶೇ. 12ಕ್ಕೆ ಮಿಗದಂತೆ ಲಾಭಾಂಶವನ್ನು ಹಂಚಲು ಅವಕಾಶವಿದ್ದಲ್ಲಿ ರಿಜಿಸ್ಟ್ರಾರ್‌ರವರ ಅನುಮತಿಯನ್ನು ಪಡೆದು ಹಂಚಬಹುದು.

(3) ನಿವ್ವಳ ಲಾಭದಲ್ಲಿ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ನಿಯಮಂಗಳು 1965ರ ನಿಯಮ 20ರ ಪ್ರಕಾರ ಸಹಕಾರಿ ಶಿಕ್ಷಣ ನಿಧಿಗೆ ಸಲ್ಲಿಸುವುದು.

(4) ಉಳಿದುದರಲ್ಲಿ ಶೇ. 20 ರಷ್ಟನ್ನು ವ್ಯಾಪಾರದ ಏರಿಳಿತ ನಿಧಿಗೆ ತೆಗೆದಿರಿಸುವುದು.

(5) ಉಳಿದುದರಲ್ಲಿ ಶೇ. 10ರಷ್ಟನ್ನು ಕಟ್ಟಡ ನಿಧಿಗೆ ತೆಗೆದಿರಿಸಂವುದು.

(6) ಉಳಿದುದರಲ್ಲಿ ಎರಡು ತಿಂಗಳ ಮೂಲ ಸಂಬಳಕ್ಕೆ ವಿುಕ್ಕಾರದಷ್ಟನ್ನು ಸಿಬ್ಬಂದಿ ವರ್ಗದವರಿಗೆ ಬೋನಸ್ ಆಗಿ ಕೊಡಬಹುದು.

ಟಿಪ್ಪಣಿ : ಯಾವುದೇ ವರ್ಷದಲ್ಲಿನ ನಿವ್ವಳ ಲಾಭವನ್ನು ಮೇಲಿನಂತೆ ಹಂಚದಿದ್ದಲ್ಲಿ ಆ ಮೊಬಲಗನ್ನು ಸಹಕಾರಿ ಸಂಘಗಳ ನಿಯಮ 21ರ ಪ್ರಕಾರ ಕಾಯ್ದಿಟ್ಟ ನಿಧಿಗೆ ಸೇರಿಸತಕ್ಕದ್ದು :

26. ಕಾಯ್ದಿಟ್ಟ ನಿಧಿ :

(1) ಪ್ರತಿ ಸಾಲಿನಲ್ಲಿಯೂ ನಿವ್ವಳ ಲಾಭದಿಂದ ಕಾಯ್ದಿಟ್ಟ ನಿಧಿಗೆ ತೆಗೆಯಲ್ಪಡುವ ಮೊತ್ತದ ಜೊತೆಗೆ ಈ ಕೆಳಗೆ ನಮೂದಿಸಿರುವ ಹಣ ಗಳನ್ನೂ ಸಹ ಕಾಯ್ದಿಟ್ಟ ನಿಧಿಗೆ ಸೇರಿಸತಕ್ಕದ್ದು ;

(1) ಪ್ರವೇಶ ಧನ ಮತ್ತು ಷೇರು ಫೀ (ಸಂಘವು ಪ್ರಾರಂಭವಾದ ಎರಡು ವರ್ಷಗಳ ನಂತರ)

(2) ಸುಸ್ತಿ ಬಡ್ಡಿ

(3) ಲಿಮಿಟೇಶನ್ ಆಕ್ಟ್ ಪ್ರಕಾರ ವಾಯಿದೆ ಗತಿಸಿಹೋದ, ಸಂಘದಿಂದ ಕೊಡಲ್ಪಡಬೇಕಾದ ಬಾಕಿಗಳು

(4) ವಿತರಣೆಯಾಗದ ಲಾಭ

(2) ಕಾಯ್ದಿಟ್ಟ ನಿಧಿಯ ಮೊಬಲಗನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಂದ ನಿಯಮಿತವಾದ ವಿಧಾನದಲ್ಲಿ ಪ್ರತ್ಯೇಕವಾಗಿ ಠೇವಣಿ ಮಾಡತಕ್ಕದ್ದು ಮತ್ತು ರಿಜಿಸ್ಟ್ರಾರ್‌ರವರ ಮಂಜೂರಾತಿಯಿಲ್ಲದೆ ಈ ನಿಧಿಯಿಂದ ಯಾವ ಮೊಬಲಗನ್ನೂ ಖರ್ಚು ಮಾಡತಕ್ಕದ್ದಲ್ಲ.

27. ಇತರ ಸಂಸ್ಥೆಗಳೊಂದಿಗೆ ಸದಸ್ಯತ್ವ :

